# ಪ್ರಸ್ತಾವನೆ

# ಸೇನಾಧಿಪತಿಯ ಕೊನೆಯಾಸರೆ

ಮಧ್ಯ ಕ್ರೋಯೇಷಿಯಾದ ಪಾಕ್ರಾಕ್ ಭೂಪ್ರದೇಶದ ಒಂದು ಭಾಗ ಕ್ರೋಯೇಷಿಯನ್ನರ ಹಿಡಿತದಲ್ಲೂ ಇನ್ನೊಂದು ಭಾಗ ಸರ್ಬಿಯನ್ನರ ಹಿಡಿತದಲ್ಲಿದ್ದರೆ ಈ ಎರಡನ್ನೂ ಬೆಸೆಯುವ ರಸ್ತೆಯೊಂದರ ಬದಿಗೆ ವಿಶ್ವಸಂಸ್ಥೆಯ ನಿಯೋಜಿತ ಸೇನೆ ಮರಳ ಚೀಲದ ಚೌಕಿಯನ್ನು ಸ್ಥಾಪಿಸಿತ್ತು. ಕೆನಡಾ ಪದಾತಿದಳಕ್ಕೆ ಸೇರಿದ್ದ ಇಬ್ಬರು ಯುವ ಯೋಧರು ಪೋರ್ಟಾಕ್ಯಾಬಿನ್‌ನ ಆ ಚೌಕಿಯನ್ನು ಕಾಯುತ್ತಿದ್ದರು. ರಸ್ತೆಯುದ್ದಕ್ಕೂ ಗುಂಡಿ, ತಗ್ಗುಗಳಲ್ಲಿ ತಲೆಕೆಳಗಾದ ಕಾರುಗಳು, ಪುಡಿಪುಡಿಯಾದ ಬಂಗಲೆಗಳ ಕೈದೋಟದಲ್ಲಿ ಸೊಂಟದೆತ್ತರ ಬೆಳೆದ ಹುಲ್ಲಿನ ಮಧ್ಯೆ ಎದ್ದು ಕಾಣುತ್ತಿದ್ದ ಹಾಳುಗೊಂಪೆಯಂತಿದ್ದ ಮಧ್ಯೆ ಸಾಗುವಗುಂಡಿ ತಗ್ಗುಗಳಿಂದ ತುಂಬಿದ ಆ ರಸ್ತೆ ಸುತ್ತಿಕೊಂಡು ಚೌಕಿಯ ಕಡೆಗೆ ಸಾಗಿತ್ತು. ಚೌಕಿಗೆ ನಾವು ಹತ್ತಿರವಾಗುತ್ತಿದ್ದಂತೆ ನಮಗೆ ಕಾಣಿಸಿದ್ದು ಇಬ್ಬರು ಯುವ ಕ್ರೋಯೇಷಿಯನ್ ಯೋಧರು ತಮ್ಮ ಬೈನಾಕ್ಯೂಲರ್‌ಗಳಿಂದ ಸರ್ಬಿಯನ್ನರ ಪ್ರದೇಶದ ಮೇಲೆ ಕಣ್ಣಿಟ್ಟಿದ್ದರು.

ಯುಎನ್ ಯೋಧರು ನಮ್ಮನ್ನು ಸರ್ಬಿಯನ್ನರ ಪ್ರದೇಶದೊಳಗೆ ಹೋಗುವುದಕ್ಕೆ ಅನುಮತಿಸಿದ ಮೇಲೆ ನಮ್ಮ ವಾಹನ ಮುಂದಕ್ಕೆ ಸಾಗುತ್ತಿದ್ದಂತೆಯೇ  ಸರ್ಬಿಯಾದ ಅರೆ ಸೇನಾಪಡೆಯ ೧೫ ಯೋಧರು ನಮ್ಮ ವ್ಯಾನ್ ಸುತ್ತುವರಿದರು.  ಹಳ್ಳಿಯೊಂದರ ಮದುವೆಯಲ್ಲಿ ಸಿಕ್ಕಾಪಟ್ಟೆ ಮದ್ಯ ಸೇವನೆ ಮಾಡಿಬಂದಂತಿದ್ದ ಅವರಲ್ಲಿನ ಒಬ್ಬನ ಪೇಲವ ಕಣ್ಣುಗಳು, ನಿಸ್ತೇಜವಾದ, ಬೆವರ ಹನಿ ತುಂಬಿದ ತ್ವಚೆಯ ಈ ಮನುಷ್ಯ ಹಾಗೋ ಹೀಗೋ ಮಾಡಿ ನಮ್ಮ ವ್ಯಾನ್ ಬಾಗಿಲು ತೆಗೆದು ಪ್ರಯಾಸದಿಂದ “ಅಚ್ಚರಿ! ನಾವ್ ನಿಮ್ಮನ್ನು ನೋಡ್ತಾ ಇದ್ವಿವಿ” ಎಂದು ಬೈನಾಕ್ಯೂಲರ್ ಹಿಡಿದವನಂತೆ ನಟನೆ ಮಾಡಿ ತೋರಿಸಿದ. ಹುಲ್ಲಿನಲ್ಲಿ ಅಡಗಿ ಕುಳಿತಿದ್ದ ಕ್ರೋಯೇಷಿಯನ್ ಸೈನಿಕರತ್ತ ಬೆರಳು ಮಾಡುತ್ತ "ನೀವು ಉಸ್ತಾಶೆ ಜೊತೆ ಮಾತನಾಡಿದ್ದಿರಲ್ಲ" ಎಂದು ತನ್ನ ಬೆಲ್ಟ್ ನಿಂದ ಪಿಸ್ತೂಲ್ ಹೊರತೆಗೆದು "ಗೂಢಚಾರಿ ನಾಯಿಗಳಾ" ಎಂದು ಹೇಳುತ್ತ ವ್ಯಾನ್ ಡ್ರೈವರ್‌ನನ್ನು ಗನ್ ಪಾಯಿಂಟ್ ನಿಂದ ಹೊರ ಹಾಕಿದ. ಆಮೇಲೆ ತಾನೇ ಡ್ರೈವರ್ ಸೀಟಿನಲ್ಲಿ ಕುಳಿತು ಎಂಜಿನ್‌ಅನ್ನು ಜೋರಾಗಿ ಒದರಿಸತೊಡಗಿದ "ನಾನು ಯಾಕೆ ಇದನ್ನು ಶೂಟ್ ಮಾಡಬಾರದು?" ಎಂದು ಹಿಂದಿನ ಸೀಟಿನಲ್ಲಿ ಕುಳಿತಿದ್ದ ಕ್ಯಾಮರಾಮೆನ್ ಗೊಣಗಿದ "ನೀನು ಹಾಗೇ ಮಾಡಲಿಕ್ಕಾಗುವುದಿಲ್ಲ. ಏಕೆಂದರೆ ಅವನು ನಿನ್ನನ್ನು ಶೂಟ್ ಮಾಡುತ್ತಾನೆ" ವ್ಯಾನಿನ ಹಿಂದಿನ ಸೀಟಿನಲ್ಲಿ ಕುಳಿತಿದ್ದವನಾರೋ ವಟಗುಟ್ಟಿದ.

ಆ ಸರ್ಬಿಯನ್ನನು ಗೇರ್ ಹಾಕಿ ವಾಹನ ಮುಂದೆ ತೆಗೆದುಕೊಳ್ಳಬೇಕು ಎನ್ನುವಷ್ಟರಲ್ಲಿ ಅಡ್ಡ ಬಂದ ಯುಎನ್ ಯೋಧ, ಇಗ್ನಿಷನ್ ಆಫ್

ಮಾಡಿದವನೇ "ನಾವದನ್ನು ಸರಿ ಮಾಡ್ತೇವೆ ಸರಿಯಾಚೆ" ಎಂದು ಒಂದು ರೀತಿಯಲ್ಲಿ ಕೂಗಿದವನಂತೆ ಸೆರ್ಬಿಯನ್ನನಿಗೆ ಹೇಳಿದ. ಭಾರವಾದ ಉಸಿರು, ಒಲ್ಲದ ಮನಸ್ಸಿನಿಂದ ಆ ಸೆರ್ಬಿಯನ್ ಡ್ರೈವರ್ ಸೀಟಿನಿಂದ ಕೆಳಗಿಳಿದ. ಅಷ್ಟರಲ್ಲಿ ಇನ್ನೊಬ್ಬ ಯುವ ಸೆರ್ಬಿಯನ್ ಹೊಡೆದಾಟಕ್ಕೆ ಸಿದ್ಧನಾಗಿ ಬಂದಿದ್ದಾನೋ ಎನ್ನುವಂತೆ ವ್ಯಾನ್‌ಗೆ ಅಡ್ಡವಾಗಿ ನಿಂತು ತಲೆ ಎತ್ತಿ "ನಾನು ಪೊಲೀಸ್ ನಿಮ್ಮನ್ನು ಆರೆಸ್ಟ ಮಾಡಿದ್ದೇನೆ. ನನ್ನನ್ನು ಹಿಂಬಾಲಿಸಿ" ಎಂದು ಗುಡುಗಿದ.

ಹೊಸ ರಾಷ್ಟ್ರೀಯತಾವಾದದ ಹುಡುಕಾಟದ ನನ್ನ ಪಯಣದಲ್ಲಿ ಇದೂ ಒಂದು ನೆನಪು. ಇದರಿಂದ ನಾನು ಅರ್ಥ ಮಾಡಿಕೊಂಡಿದ್ದು ಇಷ್ಟೇ, ಹೊಸ ಜಗತ್ತಿನ ರೀತಿ ನೀತಿಗಳಲ್ಲಿ ಪ್ಯಾರಾ ಮಿಲಿಟರಿ, ಪ್ಲಮ್ ಬ್ರ್ಯಾಂಡಿಯ ಅಮಲು ಮತ್ತು ಜನಾಂಗೀಯ ಭಾವಾವೇಶದಲ್ಲಿ ಉಂಟಾದ ಮತಿ ವೈಕಲ್ಯ, ಬಂಜರು ನೆಲದ ಮೇಲೆ ಒಬ್ಬರಿಗೆ ಇನ್ನೊಬ್ಬರು ಗುಂಡು ಹಾರಿಸಿ ಸಾಯಿಸುವುದು ಮತ್ತು ಸಾಯಿಸಿಕೊಳ್ಳುವುದು ಅಷ್ಟೇ ಏನೋ ಎಂಬ ಭಾವ ನನ್ನಲ್ಲಿ ಕೆಲಕಾಲ ಕಾಡಿತು. ಇವರಿಬ್ಬರ ನಡುವಿನ ಕಾದಾಟದ ಮೇಲೆ ನಿಯಂತ್ರಣ ಹಾಕುವುದಕ್ಕೆ ಅಂತಾರಾಷ್ಟ್ರೀಯ ಸಮುದಾಯದಿಂದ ದೊಡ್ಡ ಶಬ್ದಗಳಲ್ಲಿ ಹೇಳುವ ಆ ಚೆಕ್‌ಪಾಯಿಂಟ್‌ನಲ್ಲಿ ಕಾವಲಿಗೆ ಇದ್ದುದು ಆತಂಕದ ಮನೆಯೊಳಗೆ ಕುಳಿತಿದ್ದ ಇಬ್ಬರು ಯುವ ಯೋಧರು.  ಇನ್ನು ಸಿನಿಮಾ ತಂಡ, ಒಂದು ಕ್ಷಣ ಕನಿಷ್ಠ ನಮ್ಮನ್ನು ಜೀವಂತವಾಗಿಯಾದರೂ ಬಿಡುತ್ತಾರೋ ಇಲ್ಲವೋ ಎಂಬ ಆತಂಕದಲ್ಲಿದ್ದರು.

ಅಂತಾರಾಷ್ಟ್ರೀಯ ಸಮುದಾಯದ ಕದನ ವಿರಾಮದ ಮನವಿಗೆ ಆ ಚೆಕ್‌ಪಾಯಿಂಟ್‌ನಿಂದ ಎರಡೂ ಬದಿ ೧೫೦ ಮೀಟರ್ ಅಲ್ಲಿಂದ ಆಚೆಗೆ ಯಾವುದೇ ಕಿಮ್ಮತ್ತು ಇರಲಿಲ್ಲ. ಏನಿದ್ದರೂ ಬಂದೂಕಿನದ್ದೇ ಕಾನೂನು, ಆ ಹಳ್ಳಿಯಲ್ಲಿನ ಪೊಲೀಸ್ ಸ್ಟೇಷನ್‌ಗೆ ನಮ್ಮನ್ನು ಪ್ಯಾರಾಮಿಲಿಟರಿ ಪಡೆಯ ಯೋಧರು ಕರೆದುಕೊಂಡು ಹೋದರು. ನಮ್ಮ ಅನುವಾದಕನ ಅಜ್ಜ ಕ್ರೋಯೇಷಿಯಾದ ಕ್ರಿಕ್ (Krk) ದ್ವೀಪದಲ್ಲಿ ಹುಟ್ಟಿದ್ದ ಎನ್ನುವ ಏಕೈಕ ಕಾರಣಕ್ಕೆ, ಅಲ್ಲಿನ ಪೊಲೀಸ್ ಮುಖ್ಯಸ್ಥ ಅವನು ಕ್ರೋಯೇಷಿಯಾದ ಗೂಢಚಾರನಲ್ಲ ಎನ್ನುವುದನ್ನು ಸ್ಪಷ್ಟಪಡಿಸಿಕೊಳ್ಳುವುದಕ್ಕೆ ಸುಮಾರು ಒಂದು ಗಂಟೆ ತೆಗೆದುಕೊಂಡ. ಅಷ್ಟೊತ್ತಿಗೆ ಬಂದ ಒಂದು ಫೋನ್ ಕರೆ ನಮ್ಮನ್ನು ಬಿಡುಗಡೆ ಮಾಡುವಂತೆ ಆ ಮುಖ್ಯಸ್ಥನಿಗೆ ಸೂಚಿಸಿತು. ಆ ಆದೇಶ ನೀಡಿದ್ದು ಯಾರು ಅಂತ ಹೇಳಲಿಕ್ಕೆ ಯಾರೂ ಸಿದ್ಧರಿರಲಿಲ್ಲ. ಸ್ಥಳೀಯ ಸೆರ್ಬಿಯನ್ ಸೇನಾಧಿಪತಿಯೊಬ್ಬ ನಮ್ಮ ಬಿಡುಗಡೆಗೆ ಆದೇಶ ನೀಡಿರಬಹುದೆನ್ನುವುದು ನಮ್ಮ ಊಹೆ. ನನ್ನ ಜೀವನದಲ್ಲಿ ಮೊದಲನೇ ಬಾರಿಗೆ ಸೇನಾಧಿಪತಿಯೊಬ್ಬನ ತಾಕತ್ತು, ಅಧಿಕಾರವನ್ನು ನನಗೆ ಪರಿಚಯಿಸಿತು. ಆದರೆ ಈ ಪರಿಚಯ ನನಗೆ ಕೊನೆಯದಾಗಿ ಉಳಿಯಲಿಲ್ಲ.

ನಾನು ಶೀತಲ ಸಮರದ ಕೂಸು. ೧೯೪೭ರ ಬರ್ಲಿನ್ ಏರ್ ಲಿಫ್ಟ್ ವರ್ಷದಲ್ಲಿ ಜನಿಸಿದ ನನಗೆ, ನನ್ನ ಮೊದಲ ರಾಜಕೀಯ ನೆನಪು ಕೂಡ ದಿಗಿಲುಗೊಳಿಸುವಂತಹದ್ದೇ. ೧೯೬೨ರ ಕ್ಯೂಬಾ ಕ್ಷಿಪಣಿ ಬಿಕ್ಕಟ್ಟಿನ ದಿನಗಳಲ್ಲಿನ ಒಂದು ದಿನವಂತೂ ನನಗೆ ಭಾರಿ ದಿಗಿಲು ಮೂಡಿಸಿದ ದಿನವಾಗಿತ್ತು. ಇದೀಗ ಹಿಂದಿರುಗಿ ನೋಡಿದರೆ, ಸಾಮ್ರಾಜ್ಯಶಾಹಿಯ ಕೊನೆಯ ಕಾಲಘಟ್ಟದಲ್ಲಿ ನಾನು ಜೀವಿಸಿದ್ದೆ ಎನ್ನುವುದನ್ನು ನೋಡಬಹುದು ಅಷ್ಟೇ. ಹಿಂದಿನ ಬಾರಿ ಭಯೋತ್ಪಾದನೆಯಿಂದಾಗಿ ಶಾಂತಿಯ ವಾತಾವರಣ ನಿರ್ಮಾಣಗೊಂಡಿತ್ತು. ಆಗ ಜಗತ್ತಿನ ಎಲ್ಲ ರಾಷ್ಟ್ರಗಳು ಸ್ಪಷ್ಟವಾಗಿ ಗೆರೆ ಕೊರೆದಂತೆ ಎರಡು ಪರಸ್ಪರ ವಿರುದ್ಧ ಶಕ್ತಿಗಳ ಪ್ರಭಾವದೊಳಗೆ ಬಂದಿಯಾಗಿದ್ದವು. ಆದರೆ ಈಗ ಈ ಭಯೋತ್ಪಾದನೆ ಕೇವಲ ಭಯೋತ್ಪಾದನೆಯನ್ನಷ್ಟೇ ಹುಟ್ಟು ಹಾಕುತ್ತಿದೆ ಎಂದು ನನಗೆ ಭಾಸವಾಗುತ್ತಿದೆ.

ಕೆಲವರು ಹೇಳುವಂತೆ ಈಗಾಗಲೇ ೨೧ನೇ ಶತಮಾನ ಆರಂಭವಾಗಿದ್ದಲ್ಲಿ ಅದು ೧೯೮೯ರಲ್ಲಿಯೇ ತನ್ನ ಅಸ್ತಿತ್ವ ಸ್ಥಾಪಿಸಿದೆ ಎಂದು ಹೇಳಬೇಕಾಗುತ್ತದೆ. ಯಾವಾಗ ಬರ್ಲಿನ್ ಗೋಡೆ ಕುಸಿಯಿತೋ, ಪ್ರಾಗ್‌ನ ವೆನಸ್‌ಲಾಸ್ ಸ್ಕ್ವೈರ್‌ನ ಬಾಲ್ಕನಿಯ ಮೇಲೆ ವಾಕ್ಲಾವ್ ಹವೇಲ್ ನಿಂತಿದ್ದು ಮತ್ತು ಯುರೋಪ್‌ನಾದ್ಯಂತ ಕಮ್ಯೂನಿಸಮ್ ಅಂತ್ಯವನ್ನು ಸಂಭ್ರಮಿಸಿದ ಜನಸಮುದಾಯ, ಇವೆಲ್ಲವುಗಳನ್ನು ನೋಡಿದಾಗ ಇತರರಂತೆ ನನಗೂ ಅನ್ನಿಸಿದ್ದು ಮುಕ್ತ ಪ್ರಜಾಪ್ರಭುತ್ವದ ಶಕೆಯ ಆರಂಭಕ್ಕೆ ನಾವು ಸಾಕ್ಷೀಭೂತರಾಗುತ್ತಿದ್ದೇವೆ. ನನ್ನ ತಲೆಮಾರಂತೂ ಶೀತಲ ಯುದ್ಧದ ಬೇಗೆಯಲ್ಲಿ ಪಾರ್ಶ್ವವಾಯುವಿಗೆ ತುತ್ತಾದಂತೆ ಭಯದಲ್ಲಿ ವೃದ್ಧಾಪ್ಯವನ್ನೂ ಅಪ್ಪಿಕೊಂಡುಬಿಟ್ಟಿತ್ತು. ಏಕಾಏಕಿ, ಬಾಲ್ಟಿಕ್ ಗಣರಾಜ್ಯಗಳಿಂದ ಹಿಡಿದು ಕಪ್ಪು ಸಮುದ್ರದವರೆಗೆ, ಟಾಲ್ಲಿನ್ ನಿಂದ ಹಿಡಿದು ಬರ್ಲಿನ್‌ವರೆಗೆ, ಪ್ರಾಗ್‌ನಿಂದ ಬುಡಾಪೆಸ್ಟ್, ಬೆಲ್‌ಗ್ರೇಡ್ ಮತ್ತು ಬುಕಾರೆಸ್ಟ್ ವರೆಗೆ ಹೊಸ ರಾಷ್ಟ್ರಗಳ ನಿರ್ಮಾಣ ಪ್ರಕ್ರಿಯೆ ಜಗತ್ತಿನ ಒಂದು ಪ್ರಮುಖ ಘಟನಾವಳಿಯಾಗಿ ಬಿಟ್ಟಿತು. ಆಗಸ್ಟ್ ೧೯೯೧ರಲ್ಲಿ ಮಾಸ್ಕೋದವರು ರಷ್ಯಾ ಸಂಸತ್ತನ್ನು ಟ್ಯಾಂಕ್ ದಾಳಿಯಿಂದ ರಕ್ಷಿಸಿದ ಮೇಲೆ ನಮಗೆ ಅನ್ನಿಸಿದ್ದು, ೨೦ನೇ ಶತಮಾನದ ಕೊನೆಯ ಸಾಮ್ರಾಜ್ಯವನ್ನು ಉರುಳಿಸಿದ ನಾಗರಿಕರ ಧೈರ್ಯ, ಸಾಹಸಗಳು ಪ್ರಜಾಪ್ರಭುತ್ವದೆಡೆಗೆ ಸಾಗುತ್ತಿರುವ ರಷ್ಯಾದ ಪರಿವರ್ತನಾ ಪ್ರಕ್ರಿಯೆಯನ್ನು ಕಾಯ್ದುಕೊಳ್ಳುವಷ್ಟು ಸಮರ್ಥವಾಗಿವೆ ಎನ್ನುವುದು. ಕೆಲವೊಮ್ಮೆ ಪೂರ್ವದಲ್ಲಿ ಬೀಸುತ್ತಿರುವ ಪ್ರಜಾಪ್ರಭುತ್ವದ ಗಾಳಿ, ಪಶ್ಚಿಮದಲ್ಲಿನ ಅಲ್ಪಜನಾಧಿಪತ್ಯಗಳನ್ನು (Oligarchies) ಸಹ ತೊಳೆದು ಹಾಕಿ ಬಿಡುತ್ತದೆ ಎಂದೂ ಅನ್ನಿಸಿದ್ದುಂಟು.

ಕೆಲವೇ ದಿನಗಳಲ್ಲಿ ಈ ಅನಿಸಿಕೆ ಎಷ್ಟೊಂದು ಸುಳ್ಳು ಎನ್ನುವುದು ನಮ್ಮ ಅರಿವಿಗೆ ಬಂದಿತು. ಏಕೆಂದರೆ ಸಾಮ್ರಾಜ್ಯಶಾಹಿಯ ಅಂತಿಮ ಘಟ್ಟದಲ್ಲಿ ಏನು ಸಂಭವಿಸಿತೋ ಅದು ಹೊಸ ಯುಗದ ಹಿಂಸಾಚಾರ. ಹೊಸ ಜಗತ್ತಿನ ಪ್ರಮುಖ

ಘಟನಾವಳಿ ಅಥವಾ ಸರ್ವೆ ಸಾಮಾನ್ಯ ಸಂಗತಿ ಎಂದರೆ ರಾಷ್ಟ್ರಗಳು ಜನಾಂಗೀಯ ನಾಗರಿಕ ಯುದ್ಧಗಳಲ್ಲಿ ವಿಭಜನೆಗೊಳ್ಳುವುದು ಮತ್ತು ಇಂತಹ ಜನಾಂಗೀಯ ನಾಗರಿಕ ಯುದ್ಧಗಳ ಪ್ರಮುಖ ಕರ್ತಾರರು ಸೇನಾಧಿಪತಿಗಳೆ ಆಗಿದ್ದರು. ಈ ಜನಾಂಗೀಯ ಯುದ್ಧದ ಪ್ರಮುಖ ಭಾಷೆ ಅಥವಾ ಪ್ರಮುಖ ಪರಿಕಲ್ಪನೆ ಎಂದರೆ ಜನಾಂಗೀಯ ಆಧಾರಿತ ರಾಷ್ಟ್ರೀಯತೆ.

ಉಲ್ಲಾಸಭರಿತ ಹಗುರ ಮನಸ್ಸಿನೊಂದಿಗೆ ನಮಗೆ ನಾವೇ ಹೇಳಿಕೊಂಡಿದ್ದು ಜಗತ್ತು ಮರಳಿ ಬರಲಿಕ್ಕಾಗದಂತಹ ರಾಷ್ಟ್ರೀಯತಾ ಮನೋಭಾವನೆ, ಜನಾಂಗೀಯ ಮಾನಸಿಕತೆಯ ಆಚೆಗೆ ಸಾಗುತ್ತಿದೆ. ನಮ್ಮ ಪಾಸ್‌ಪೋರ್ಟ್‌ಗಳಲ್ಲಿ ಎದ್ದು ಕಾಣುವ ಪ್ರಾದೇಶಿಕ ಅಸ್ಮಿತೆಯನ್ನು ಮೀರಿ ಈ ಜಗತ್ತು ಜಾಗತಿಕ ಮಾರುಕಟ್ಟೆಯಾಗುವತ್ತ ಕಾಲಿಡುತ್ತಿದೆ. ಇನ್ನು ಮುಂದೆ ಅದೇ ನಮ್ಮ ಮನೆಯಾಗಲಿದೆ. ಹಿನ್ನೋಟದಲ್ಲಿ ನಾವು ಕತ್ತಲೆಯಲ್ಲಿ ಶಿಳ್ಳೆ ಹಾಕುತ್ತಿದ್ದೆವು. ದಮನಿತರು ಹಿಂದಿರುಗಿದ್ದರು. ಅದರ ಹೆಸರೇ ರಾಷ್ಟ್ರೀಯತೆ.

## ನಾಗರಿಕ ಮತ್ತು ಜನಾಂಗೀಯ ರಾಷ್ಟ್ರೀಯತೆ

ರಾಜಕೀಯ ತತ್ತ್ವವಾದದ ಪ್ರಕಾರ, ಜಗತ್ತಿನ ಎಲ್ಲ ಜನರು ರಾಷ್ಟ್ರಗಳಾಗಿ ವಿಭಜನೆಗೊಂಡಿರುವುದು ರಾಷ್ಟ್ರೀಯತೆಯ ಆಧಾರದ ಮೇಲೆ. ಪ್ರತಿಯೊಂದು ರಾಷ್ಟ್ರಕ್ಕೂ ಸ್ವ-ನಿರ್ಧಾರದ ಅಧಿಕಾರ ಮತ್ತು ಸಾಮರ್ಥ್ಯವಿದೆ. ಈ ಸ್ವ-ನಿರ್ಧಾರದ ಅಧಿಕಾರ ಈಗಾಗಲೇ ಅಸ್ತಿತ್ವದಲ್ಲಿರುವ ರಾಷ್ಟ್ರಗಳಲ್ಲಿ ಇಲ್ಲವೇ ಸ್ವತಂತ್ರ ರಾಜ್ಯಗಳಲ್ಲಿ ಇರಬಹುದು.

ಸಾಂಸ್ಕೃತಿಕವಾಗಿ ರಾಷ್ಟ್ರೀಯತೆಯನ್ನು ವ್ಯಾಖ್ಯಾನಿಸಿದರೆ, ಪುರುಷರು ಮತ್ತು ಸ್ತ್ರೀಯರಿಗೆ ಅವರದ್ದೇ ಆದ ಅನೇಕ ಅಸ್ಮಿತೆಗಳು ಇವೆ. ಆದರೆ, ರಾಷ್ಟ್ರ ಎನ್ನುವುದು ಅವರಿಗೆ ತಾವು ಒಂದೇ ಪ್ರದೇಶಕ್ಕೆ ಸೇರಿದವರು ಎನ್ನುವ ಭಾವನೆಯನ್ನು ಅವರಲ್ಲಿ ಹುಟ್ಟು ಹಾಕುತ್ತದೆ.

ನೈತಿಕತೆಯ ತಾತ್ತ್ವಿಕತೆಯು, ರಾಷ್ಟ್ರೀಯತೆಯು ಬಲಿದಾನದ ಸಂಕೇತವಾಗಿದ್ದು ಇದರಲ್ಲಿ ಒಂದು ರಾಷ್ಟ್ರವು ಆಂತರಿಕ ಮತ್ತು ಬಾಹ್ಯ ವಿರೋಧಿಗಳ ವಿರುದ್ಧ ತೆಗೆದುಕೊಳ್ಳುವ ಹಿಂಸಾತ್ಮಕ ನೀತಿಯನ್ನು ಸಮರ್ಥಿಸುತ್ತದೆ.

ರಾಷ್ಟ್ರೀಯತೆಯನ್ನು ಕುರಿತ ಈ ರಾಜಕೀಯ, ನೈತಿಕ ಮತ್ತು ಸಾಂಸ್ಕೃತಿಕ ವಾದಗಳು ಪರಸ್ಪರ ಒತ್ತಾಸೆಯಾಗಿವೆ. ರಾಷ್ಟ್ರಗಳು ಹಿಂಸಾಚಾರ, ಬಲಪ್ರಯೋಗದ ಮೂಲಕ ತಮ್ಮನ್ನು ರಕ್ಷಿಸಿಕೊಳ್ಳಬಹುದು ಎಂಬ ನಂಬಿಕೆಯು ಭದ್ರತೆ ಹಾಗೂ ಬಾಂಧವ್ಯಗಳು ಬಹಳ ಮುಖ್ಯವಾದ ಅಗತ್ಯ ಎಂಬ ಸಾಂಸ್ಕೃತಿಕ ನಂಬಿಕೆಯನ್ನು ಅವಲಂಬಿಸಿದೆ. ಸಾಂಸ್ಕೃತಿಕ ಪರಂಪರೆಯನ್ನು ಬುನಾದಿಯನ್ನಾಗಿಸಿಕೊಂಡ ಜನರು ಸ್ವತಂತ್ರ ರಾಷ್ಟ್ರಕ್ಕಾಗಿ

ಹೋರಾಟ ಮಾಡಬೇಕು ಮತ್ತು ಅಂತಹ ರಾಷ್ಟ್ರಗಳು ಮಾತ್ರ ಈ ಅಗತ್ಯಗಳನ್ನು ಪೂರೈಸಬಲ್ಲವು ಎನ್ನುತ್ತದೆ ಈ ತಾತ್ತ್ವಿಕವಾದ. ಅದೇ ಹೊತ್ತಿಗೆ ಸಾಂಸ್ಕೃತಿಕ ರಾಷ್ಟ್ರೀಯತೆಯು ಸ್ವನಿರ್ಧಾರದ ಸಾಮರ್ಥ್ಯವಿಲ್ಲದೇ ಈ ಅಗತ್ಯತೆಗಳ ಈಡೇರುವಿಕೆ ಸಾಧ್ಯವಿಲ್ಲ ಎನ್ನುತ್ತದೆ.

ಇಲ್ಲಿನ ಪ್ರತಿಯೊಂದು ವಾದ ಚರ್ಚಾಸ್ಪದವಾಗಿರುವಂತಹುದೇ ಮತ್ತು ಅಂತರ್ಬೋಧೆಯಿಂದ ನೋಡಿದಲ್ಲಿ ಒಂದರಲ್ಲೂ ಸ್ಪಷ್ಟತೆ ಇಲ್ಲ. ಜಗತ್ತಿನ ಅನೇಕ ಬುಡಕಟ್ಟು ಜನರು ಮತ್ತು ಜನಾಂಗೀಯ ಅಲ್ಪಸಂಖ್ಯಾತರು ತಮ್ಮನ್ನು ತಾವೇ ಒಂದು ಪ್ರತ್ಯೇಕ ರಾಷ್ಟ್ರ ಎಂದು ಪರಿಭಾವಿಸುವುದಿಲ್ಲ. ಮತ್ತೆ ಅನೇಕರಿಗೆ ತಮ್ಮದೇ ಆದ ಒಂದು ರಾಜ್ಯವೂ ಬೇಕಿಲ್ಲ. ಇಲ್ಲೂ ಸ್ಪಷ್ಟತೆ ಇಲ್ಲ, ಇದೆಲ್ಲಕ್ಕಿಂತ ಮಿಗಿಲಾಗಿ ವೈಯಕ್ತಿಕ ಅಸ್ಮಿತೆಗಿಂತ ರಾಷ್ಟ್ರೀಯತೆಯ ಅಸ್ಮಿತೆ ಏಕೆ ಅಷ್ಟು ಮಹತ್ತ್ವ ಪಡೆಯಬೇಕು. ಅಲ್ಲದೇ ರಾಷ್ಟ್ರ ರಕ್ಷಣೆಯಲ್ಲಿ ಹಿಂಸೆಯ ಅಗತ್ಯವನ್ನು ಏಕೆ ಸಮರ್ಥಿಸಲಾಗುತ್ತದೆ ಎನ್ನುವುದರಲ್ಲೂ ಸ್ಪಷ್ಟತೆ ಇಲ್ಲ.

ಒಂದು ಕ್ಷಣದ ಮಟ್ಟಿಗೆ, ಜನರ ರಕ್ಷಣೆಗೆ ಅಥವಾ ಸ್ವ ನಿರ್ಧಾರ ತೆಗೆದುಕೊಳ್ಳುವ ಹಕ್ಕು ನಿರಾಕರಿಸಿದ ಸಂದರ್ಭದಲ್ಲಿ ಹಿಂಸೆ ಅಥವಾ ಬಲಪ್ರಯೋಗದ ಸಮರ್ಥನೆಯು ರಾಷ್ಟ್ರೀಯತೆಯಲ್ಲಿ ಮುಖ್ಯವಾಗಿಬಿಡುತ್ತದೆ. ಇಲ್ಲಿ ಸ್ವ-ನಿರ್ಧಾರ ಅಂದರೆ ಉದ್ಭವಿಸಿರುವ ಪ್ರಶ್ನೆಗೆ ಉತ್ತರವಾಗಿ ಆಯಾ ರಾಷ್ಟ್ರದ ಸಮುದಾಯ ಅಸ್ತಿತ್ವದಲ್ಲಿರುವ ವ್ಯವಸ್ಥೆಯ ಚೌಕಟ್ಟಿನೊಳಗೆ ತಾನು ಅಂದುಕೊಂಡ ಗುರಿ ಸಾಧಿಸುವುದು. ಅಥವಾ ತನ್ನದೇ ಸ್ವತಂತ್ರ ರಾಜ್ಯ ಹುಟ್ಟು ಹಾಕುವ ನಂಬಿಕೆಯ ಆಧಾರದ ಮೇಲೆ ಪ್ರಜಾಪ್ರಭುತ್ವದ ಸ್ವ-ಆಡಳಿತ ಇಲ್ಲವೇ ಸಾಂಸ್ಕೃತಿಕ ಸ್ವಾಯತ್ತತೆಯನ್ನು ಸ್ವ ನಿರ್ಧಾರವೆಂದು ಪರಿಭಾವಿಸಬಹುದು.

ಎಲ್ಲ ಪ್ರಕಾರದ ರಾಷ್ಟ್ರೀಯತೆಗಳು ರಾಜಕೀಯ ಸಾರ್ವಭೌಮತೆಯನ್ನು ಜನರಲ್ಲಿ ಇರಿಸಿವೆ. ನಿಸ್ಸಂಶಯವಾಗಿ ರಾಷ್ಟ್ರ ಎನ್ನುವ ಶಬ್ದಕ್ಕೆ ಸಮಾನಾರ್ಥಕ ಪದ ಜನರು ಅಥವಾ ನಾಗರಿಕರು ಆಗಿದ್ದರೂ ಸಹ ಎಲ್ಲ ರಾಷ್ಟ್ರೀಯ ಚಳವಳಿಗಳು ಪ್ರಜಾತಾಂತ್ರಿಕ ಆಡಳಿತ ವ್ಯವಸ್ಥೆ ಹುಟ್ಟು ಹಾಕುತ್ತವೆ ಎಂದು ಹೇಳಲಿಕ್ಕಾಗುವುದಿಲ್ಲ. ಏಕೆಂದರೆ ರಾಷ್ಟ್ರವೆಂದು ವ್ಯಾಖ್ಯಾನಿಸುವ ರಾಷ್ಟ್ರೀಯತೆಯು ಎಲ್ಲ ಜನರನ್ನು ಒಳಗೊಂಡಿರುವುದಿಲ್ಲ.

ನಾಗರಿಕ ರಾಷ್ಟ್ರೀಯತೆ ಇದು ಇನ್ನೊಂದು ಮಾದರಿಯದ್ದು. ಜನಾಂಗ, ಬಣ್ಣ, ಲಿಂಗ, ಮತ, ಪಂಥ ಭಾಷೆ ಅಥವಾ ಜನಾಂಗೀಯತೆ ಇವೆಲ್ಲವುಗಳು ರಾಷ್ಟ್ರವೊಂದರಲ್ಲಿ ಇರಬೇಕು ಎನ್ನುತ್ತದೆ ನಾಗರಿಕ ರಾಷ್ಟ್ರೀಯ ಮನೋಭಾವ. ರಾಜಕೀಯವೊಂದನ್ನೇ ಉದ್ದೇಶವಾಗಿರಿಸಿಕೊಂಡ ರಾಷ್ಟ್ರೀಯತೆಗೆ ಯಾರು ಸಮರ್ಥನೆ ನೀಡಿಯಾರು? ಏಕೆಂದರೆ ನಾಗರಿಕ ರಾಷ್ಟ್ರೀಯತೆ ಎಂದು ಕರೆಸಿಕೊಳ್ಳುವ ರಾಷ್ಟ್ರೀಯ ಮನೋಭಾವನೆಯಲ್ಲಿ ದೇಶ ಭಕ್ತಿಯಲ್ಲಿ ಒಗ್ಗಟ್ಟು, ನಾಗರಿಕ ಹಕ್ಕುಗಳು, ಸಮುದಾಯಗಳ ಮಧ್ಯೆ ಸಮಾನತೆ, ಸಮಾನ ರಾಜಕೀಯ ವ್ಯವಸ್ಥೆ ಮತ್ತು ಮೌಲ್ಯಗಳಿರುವ ರಾಷ್ಟ್ರವನ್ನು ಇದು ಕಲ್ಪನೆ

ಮಾಡಿಕೊಳ್ಳುತ್ತದೆ. ನಿಸ್ಸಂಶಯವಾಗಿ ಇಂತಹ ರಾಷ್ಟ್ರೀಯತೆಯು ಪ್ರಜಾತಾಂತ್ರಿಕವಾಗಿರುತ್ತದೆ. ಏಕೆಂದರೆ ಇದರ ಪರಮಾಧಿಕಾರ ಜನರಲ್ಲಿರುತ್ತದೆ. ಈ ತಾತ್ತ್ವಿಕತೆಯ ಕೆಲವೊಂದು ಅಂಶಗಳು ಮೊದಲು ಗ್ರೇಟ್ ಬ್ರಿಟನ್‌ನಲ್ಲಿ ಆಚರಣೆಗೆ ಬಂದವು. ಹದಿನೆಂಟನೇ ಶತಮಾನದ ಮಧ್ಯಾವಧಿಯ ಹೊತ್ತಿಗೆ ಬ್ರಿಟನ್ ಐರಿಷ್, ದಿ ಸ್ಕಾಟ್ಸ್, ದಿ ವೆಲ್ಸ್ ಮತ್ತು ಇಂಗ್ಲೆಂಡ್ ಈ ನಾಲ್ಕು ದೇಶಗಳನ್ನು ಒಳಗೊಂಡ ರಾಷ್ಟ್ರವಾಗಿ ರೂಪು ತಳೆಯಿತು. ಜನಾಂಗೀಯವಾಗಿ ನಮ್ಮವರೆಂಬ ಭಾವನೆಯ ಹೊರತಾಗಿ ನಾಗರಿಕವಾಗಿ ಇಲ್ಲಿ ಒಗ್ಗಟ್ಟು ಸ್ಥಾಪಿತಗೊಂಡಿತು. ಅಂದರೆ ರಾಜ ಮನೆತನ, ಸಂಸತ್ತು, ಕಾಯ್ದೆಯ ಆಡಳಿತ ಈ ಸಮಾನ ಆಸ್ಥೆಯ ಸಂಗತಿಗಳು ಒಗ್ಗಟ್ಟಾಗುವಂತೆ ಮಾಡಿತು. ಆದರೆ ಇದು ಕೂಡ ಆಗಿದ್ದು ಫ್ರೆಂಚ್ ಮತ್ತು ಅಮೆರಿಕ ಕ್ರಾಂತಿಯ ಅನಂತರ ಮತ್ತು ಫ್ರೆಂಚ್ ಮತ್ತು ಅಮೆರಿಕನ್ ಗಣರಾಜ್ಯಗಳ ಉದಯದ ಅನಂತರವೇ. ಈ ನಾಗರಿಕ ರಾಷ್ಟ್ರೀಯತೆಯು ಇಡೀ ಜಗತ್ತನ್ನು ಜಯಿಸಲು ಹೊರಟಿತು.

ಪ್ರಜ್ಞಾವಂತ ಸಮಾಜ ಜನಾಂಗೀಯ ಏಕಮೂಲ ಮತ್ತು ಏಕಮೂಲದವರೆನ್ನುವಂತೆ ಪಾಲಿಸಿಕೊಂಡು ಬಂದ ಆಚರಣೆಗಳು ಇಂತಹದ್ದೊಂದು ತಾತ್ತ್ವಿಕ ಆದರ್ಶಗಳು ಆಚರಣೆಗೆ ಬರುವುದಕ್ಕೆ ಸುಲಭ ಮಾರ್ಗ ಹುಟ್ಟು ಹಾಕಿದವು. ದಾಸ್ಯದ ವಿರುದ್ಧ ಹೋರಾಡಿದ ಪುರುಷರು, ಕಾರ್ಮಿಕರು, ಮಹಿಳೆಯರು, ನಿಗ್ರೋಗಳು, ಮೂಲ ನಿವಾಸಿಗಳನ್ನು ಶ್ವೇತ ವರ್ಣಿಯರಿಗೆ ನೀಡಿದ ಮತದಾನದ ರಾಜಕೀಯ ಹಕ್ಕುಗಳಿಂದ ಹೊರಗೆ ಇಡುವ ಮೂಲಕ ಅವರಿಗೆ ನಾಗರಿಕತ್ವ ನಿರಾಕರಿಸಲಾಯಿತು, ತನ್ಮೂಲಕ ದೇಶದಿಂದ ಹೊರಗಿಡಲಾಯಿತು. ೧೯ನೇ ಶತಮಾನದಾದ್ಯಂತ ಮತ್ತು ೨೦ನೇ ಶತಮಾನದ ಆರಂಭಿಕ ಕಾಲಘಟ್ಟದವರೆಗೂ ಈ ಸಮುದಾಯಗಳು ತಮ್ಮ ನಾಗರಿಕ ಹಕ್ಕುಗಳಿಗೆ ಹೋರಾಟ ಮಾಡಿದವು. ಈ ಹೋರಾಟದ ಫಲವಾಗಿ ಇಂದಿನ ಬಹುತೇಕ ಪಾಶ್ಚಿಮಾತ್ಯ ರಾಷ್ಟ್ರಗಳು ಸಮಾನ ನಾಗರಿಕತ್ವದ ಆಧಾರದ ಮೇಲೆ ತಮ್ಮ ರಾಷ್ಟ್ರೀಯತೆಯನ್ನು ಬಿಂಬಿಸುತ್ತವೆಯೇ ವಿನಾ ಸಮಾನ ಜನಾಂಗೀಯತೆಯ ಆಧಾರದ ಮೇಲೆ ಅಲ್ಲ. ಇದಕ್ಕೆ ಮುಖ್ಯ ಅಪವಾದ ಎಂದರೆ ಅದು ಜರ್ಮನಿ.

೧೮೦೬ರಲ್ಲಿ ಜರ್ಮನಿ ಮತ್ತದರ ಪ್ರಾಂತ್ಯಗಳ ಮೇಲೆ ನೆಪೋಲಿಯನ್‌ನ ದಾಳಿ ಮತ್ತು ವಶಪಡಿಸಿಕೊಳ್ಳುವಿಕೆಯು ಜರ್ಮನ್ನರ ದೇಶಭಕ್ತಿಯ ಕೋಪವನ್ನು ಉದ್ದೀಪನಗೊಳಿಸಿತು. ತನ್ನ ದೇಶದ ಮೇಲಿನ ಫ್ರೆಂಚರ ದಾಳಿಯನ್ನು ಜರ್ಮನ್ನರು ಭಾವಾವೇಶದಿಂದ ಖಂಡಿಸುವಂತೆ ಮಾಡಿತು. ಜರ್ಮನ್ ತಾತ್ತ್ವಿಕವಾದಿಗಳಳು ರಾಜ್ಯಗಳಿಂದ ರಾಷ್ಟ್ರದ ನಿರ್ಮಾಣವಾಗಲಿಲ್ಲ, ಬದಲಿಗೆ ರಾಷ್ಟ್ರವೇ ತನ್ನ ಜನ, ತನ್ನ ರಾಜ್ಯವನ್ನು ಹುಟ್ಟುಹಾಕಿತು. ಇದು ರಾಷ್ಟ್ರವನ್ನು ಒಗ್ಗೂಡುವಂತೆ ಮಾಡಿತು ಎಂದು ವಾದಿಸಿದರು. ಯಾವ ಭಾವನೆ, ಆಸ್ಥೆಗಳು ನೆಲವನ್ನು ತಾಯ್ನೆಲವನ್ನಾಗಿ ಪರಿವರ್ತಿಸಿತು, ಯಾವ ವೈಚಾರಿಕತೆ ರಾಷ್ಟ್ರದ ಬಗ್ಗೆ ಆಸ್ಥೆ ಹುಟ್ಟು ಹಾಕಿತೊ, ಈ ಎಲ್ಲವು ಕೇವಲ ಸಮಾನ ಹಕ್ಕಿಗಾಗಿ

ಮಾಡಿದ ಶಾಂತ ಮನಸ್ಸಿನ ವೈಚಾರಿಕ ಕಲ್ಪನೆಯಲ್ಲ, ಆದರೆ ಅದು ಈ ಮೊದಲೇ ಅಸ್ತಿತ್ವದಲ್ಲಿದ್ದ ಜನಾಂಗೀಯ ವೈಶಿಷ್ಟ್ಯಗಳಾದ ಭಾಷೆ, ಧರ್ಮ, ಆಚರಣೆಗಳು ಮತ್ತು ಸಂಪ್ರದಾಯಗಳಾಗಿದ್ದವು. ಯುರೋಪಿಯನ್ ಚಿಂತನಾ ಶೈಲಿಯಲ್ಲಿ ಒಂದು ರಾಷ್ಟ್ರವಾಗಿ ಪೋಲ್ಕ್ ತನ್ನ ಅಸ್ತಿತ್ವದ ಪಯಣವನ್ನು ನಾನಾ ರೀತಿಯ ತೊಂದರೆಗಳನ್ನು ಕಟ್ಟಿಕೊಂಡು ಆರಂಭಿಸಿತು. ೧೯ನೇ ಶತಮಾನದ ಎಲ್ಲ ಯುರೋಪಿಯನ್ ನಾಗರಿಕರು ಸಾಮ್ರಾಜ್ಯಶಾಹಿಯ ಹಿಡಿತದೊಳಗೆ ಇದ್ದರು. ಪೋಲ್ಸ್ ಮತ್ತು ಬಾಲ್ಟಿಕ್ ರಷ್ಯನ್ ನೊಗದ ನಿಯಂತ್ರಣದಲ್ಲಿದ್ದರು. ಸರ್ಬಿಯನ್ನರು ಟರ್ಕಿಗಳ ಹಿಡಿತದಲ್ಲಿದ್ದರು. ಹ್ಯಾಬ್ಸಬರ್ಗ್ಸ್‌ಗಳ ಹಿಡಿತದಲ್ಲಿದ್ದ ಕ್ರೋಯೇಷಿಯನ್‌ರು ಸ್ವ ಆಡಳಿತ ಮತ್ತು ಸ್ವ-ನಿರ್ಧಾರದ ಹಕ್ಕು ಸ್ಥಾಪನೆಗೆ ಜನಾಂಗೀಯ ರಾಷ್ಟ್ರೀಯವಾದದ ಪ್ರೇರಣೆಗೆ ಜರ್ಮನ್ನರ ಆದರ್ಶಗಳತ್ತ ನೋಡುತ್ತಿದ್ದರು. ೧೮೭೧ರಲ್ಲಿ ಜರ್ಮನಿ ಏಕೀಕರಣಗೊಂಡು ಜಾಗತಿಕ ಶಕ್ತಿಯಾಗಿ ಬೆಳೆದು ನಿಂತಿದ್ದು ಜನಾಂಗೀಯ ರಾಷ್ಟ್ರೀಯವಾದದ ಯಶಸ್ಸಿಗೆ ಕನ್ನಡಿಯಾಯಿತು. ಹೀಗಾಗಿ ಯುರೋಪಿನ ಸಾಮ್ರಾಜ್ಯಶಾಹಿಗಳ ಸೆರೆಯಲ್ಲಿದ್ದ ಎಲ್ಲ ರಾಷ್ಟ್ರಗಳೂ ಜರ್ಮನ್ನರ ಜನಾಂಗೀಯ ರಾಷ್ಟ್ರೀಯವಾದದತ್ತ ನೋಡುತ್ತಿದ್ದರು.

ಈ ಎರಡು ರೀತಿಯ ರಾಷ್ಟ್ರೀಯವಾದಗಳ ಪೈಕಿ ನಾಗರಿಕ ರಾಷ್ಟ್ರೀಯವಾದ ಬಹುಮಟ್ಟಿಗೆ ಸಾಮಾಜಿಕ ವಾಸ್ತವತೆಯ ಮೇಲೆ ನಿಂತಿದೆ. ಬಹುತೇಕ ಸಮಾಜಗಳು ಏಕ ಜನಾಂಗೀಯ ಸಮಾಜಗಳಲ್ಲ, ಮತ್ತು ಒಂದು ವೇಳೆ ಹಾಗಿದ್ದರೂ ಸಹ, ಏಕ ಜನಾಂಗೀಯತೆಯಲ್ಲೂ ಸಹ ಸಾಮಾಜಿಕ ವಿಭಜನೆಯನ್ನು ಸಂಪೂರ್ಣವಾಗಿ ಅಳಿಸಿ ಹಾಕಲಿಕ್ಕೆ ಆಗುವುದಿಲ್ಲ. ಏಕೆಂದರೆ ವ್ಯಕ್ತಿನಿಷ್ಠೆಯ ಹಲವಾರು ಪ್ರತಿಪಾದನೆಗಳಲ್ಲಿ ಜನಾಂಗೀಯತೆಯೂ ಒಂದು. ನಾಗರಿಕ ರಾಷ್ಟ್ರಿಯತಾ ಮತಾನುಯಾಯಿಗಳ ಪ್ರಕಾರ ಸಮಾಜವನ್ನು ಒಗ್ಗೂಡಿಸಿ ಹಿಡಿಯುವುದು ಮತ್ತಾವ ಸಮಾನಾಂಶವೂ ಅಲ್ಲ. ಬದಲಿಗೆ ಕಾನೂನು ಆ ಕೆಲಸ ಮಾಡುತ್ತದೆ. ಪ್ರಜಾತಾಂತ್ರಿಕ ವಿಧಾನಗಳು ಮತ್ತು ಮೌಲ್ಯಗಳಿಗೆ ಸಮ್ಮತಿ ಸೂಚಿಸುವ ಮೂಲಕ ವ್ಯಕ್ತಿಗಳು ತಮ್ಮ ಸಮುದಾಯದೊಂದಿಗೆ ಇರಬೇಕಾದ ಅಗತ್ಯವನ್ನು ಮನಗಂಡು ಮತ್ತು ತಮ್ಮ ಜೀವನ ರೂಪಿಸಿಕೊಳ್ಳುವುದಕ್ಕೆ ತಮಗಿರುವ ಹಕ್ಕುಗಳೊಂದಿಗೆ ರಾಜಿ ಮಾಡಿಕೊಳ್ಳುತ್ತಾರೆ. ಕಾಲಾನಂತರದಲ್ಲಿ ಈ ಹೊಂದಾಣಿಕೆಯು ಒಂದು ರಾಷ್ಟ್ರಕ್ಕೆ ಸೇರಿದವರೆಂಬ ಭಾವನೆ ಹುಟ್ಟು ಹಾಕಿ ಒಂದು ವೈಚಾರಿಕ ಶ್ರದ್ಧೆಯ ರೂಪ ಪಡೆಯುತ್ತದೆ.

ಇದಕ್ಕೆ ತದ್ವಿರುದ್ಧವೆನ್ನುವಂತಿರುವ ಜನಾಂಗೀಯ ರಾಷ್ಟ್ರೀಯವಾದ, ದೇಶವನ್ನು ಕುರಿತ ವ್ಯಕ್ತಿಯ ತೀವ್ರ ಆಸಕ್ತಿಯು ವಂಶಪಾರಂಪರ್ಯದ ಪರವಾಗಿ ಬಂದಿದೆಯೇ ವಿನಾ ಅದು ಆಯ್ಕೆಯಲ್ಲ. ಇಡೀ ಸಮುದಾಯ ವ್ಯಕ್ತಿಯ ಲಕ್ಷಣ ನಿರೂಪಣೆ ಮಾಡುತ್ತದೆಯೇ ಹೊರತು ವ್ಯಕ್ತಿಯೊಬ್ಬ ಸಮುದಾಯದ ಲಕ್ಷಣ ನಿರೂಪಣೆ ಮಾಡುವುದಿಲ್ಲ. ನಾಗರಿಕ ರಾಷ್ಟ್ರೀಯವಾದಕ್ಕಿಂತ ಇದು

ಮಾನಸಿಕವಾಗಿ ಸಾಕಷ್ಟು ಆಳವಾದ ಭಾವನೆಗಳನ್ನು ಹೊಂದಿದ್ದರೂ ಮತ್ತು ಇದರೊಟ್ಟಿಗೆ ಬರುವ ಸಾಮಾಜಿಕ ಸಂಗತಿಗಳು ಉತ್ತಮವೇ ಆದರೂ ಇದು ವಾಸ್ತವಿಕತೆಗೆ ದೂರವಾಗಿವೆ. ವಾಸ್ತವಿಕ ಉದಾಹರಣೆಯಾಗಿ ಸೆರ್ಬಿಯನ್ನರಿಬ್ಬರ ಜನಾಂಗೀಯ ಅಸ್ಮಿತೆ ಒಂದೇ ಆಗಿದ್ದು, ಕ್ರೋಯೇಷಿಯನ್ನರ ವಿರುದ್ಧ ಹೋರಾಡುವುದಕ್ಕೆ ಅವರಿಬ್ಬರನ್ನು ಆ ಅಸ್ಮಿತೆ ಒಂದುಗೂಡಿಸುತ್ತದೆ. ಆದರೆ, ಇದು ಕೆಲಸ, ಸಂಗಾತಿ, ವಿರಳ ಸಂಪನ್ಮೂಲಗಳಿಗಾಗಿ ಇವರಿಬ್ಬರ ನಡುವಿನ ಹೊಡೆದಾಟ ನಿಲ್ಲಿಸುವ ನಿಟ್ಟಿನಲ್ಲಿ ಏನೂ ಮಾಡುವುದಿಲ್ಲ. ಹೀಗೆ ಸಾಮಾನ್ಯ ಜನಾಂಗೀಯತೆಯು ಸಾಮಾಜಿಕ ಸಾಂಗತ್ಯವನ್ನು ಅಥವಾ ಸಮುದಾಯವನ್ನು ಹುಟ್ಟು ಹಾಕುವುದಿಲ್ಲ ಮತ್ತು ಯಾವಾಗ ಅದು ಹಾಗೆ ಮಾಡುವಲ್ಲಿ ವಿಫಲವಾಗುತ್ತದೋ, ವಾಸ್ತವಿಕವಾಗಿ ಆ ರೀತಿ ವಿಫಲವಾಗಲೇಬೇಕು, ಇಂತಹ ಸಂದರ್ಭಗಳಲ್ಲಿ ದೇಶದ ಆಡಳಿತ ವ್ಯವಸ್ಥೆಯು ಏಕತೆಯನ್ನು ಕಾಯ್ದುಕೊಳ್ಳುವುದಕ್ಕೆ ಸಹಮತಕ್ಕಿಂತ ಬಲಪ್ರಯೋಗ ಮಾಡಬೇಕಾದ ಅನಿವಾರ್ಯತೆಗೆ ಒಳಗಾಗುತ್ತದೆ. ಜನಾಂಗೀಯ ಆಧಾರಿತ ರಾಷ್ಟ್ರೀಯತೆಯು ಪ್ರಜಾತಾಂತ್ರಿಕ ವ್ಯವಸ್ಥೆಗಿಂತ ಏಕೆ ನಿರಂಕುಶವಾಗಿರುತ್ತವೆ ಎನ್ನುವುದಕ್ಕೆ ಇದು ಒಂದು ಕಾರಣ.

ಒಟ್ಟಾರೆ ಬಹುಸಂಖ್ಯಾತ ಜನಾಂಗೀಯರ ಹಿತರಕ್ಷಣೆಗೆ ಪ್ರಜಾಪ್ರಭುತ್ವ ಕೆಲಸ ಮಾಡುತ್ತದೆ. ಈ ಮೂಲಕ ತಮ್ಮ ನಿರಂಕುಶತೆಯನ್ನು ಇವರು ಸಾಬೀತುಪಡಿಸುತ್ತಾರೆ. ಶೀತಲ ಯುದ್ಧಾನಂತರ ಬಹುತೇಕ ರಾಷ್ಟ್ರಗಳು ನಾಗರಿಕ ಸಮಾನ ಹಕ್ಕುಗಳನ್ನು ಕುರಿತ ಕಾಳಜಿಯನ್ನು ಕೇವಲ ಬಾಯಿ ಮಾತುಗಳಲ್ಲಿ ವ್ಯಕ್ತಪಡಿಸಿ ಬಿಡುತ್ತವೆ. ಸೆರ್ಬಿಯಾ, ಕ್ರೋಯೇಷಿಯಾ ಮತ್ತು ಬಾಲ್ಟಿಕ್ ರಾಜ್ಯಗಳು, ಏಷ್ಯಾದ ಹೊಸ ಗಣರಾಜ್ಯಗಳಂತೂ ಬಹುಸಂಖ್ಯಾತ ಜನಾಂಗೀಯರ ಪ್ರಾಬಲ್ಯಕ್ಕೆ ಸಾಂಸ್ಥಿಕ ಸ್ವರೂಪ ನೀಡಿಬಿಟ್ಟಿವೆ. ಈ ಹಿಂದೆ ಅಲ್ಪಸಂಖ್ಯಾತ ರಷ್ಯನ್ನರಿಂದ ಆಳಲ್ಪಡುತ್ತಿದ್ದ ಬಾಲ್ಟಿಕ್ ಜನರಿಗೆ ಮತ್ತು ಉಕ್ರೇನಿಯನ್ ಅಂತಹ ಜನಾಂಗೀಯ ಬಹುಸಂಖ್ಯಾತರಿಗೆ ಜನಾಂಗೀಯ ರಾಷ್ಟ್ರೀಯವಾದವು ನಿರ್ದಿಷ್ಟ ಪ್ರಚೋದನಕಾರಿ ವಿಷಯವಾಗಿತ್ತು.

ಎಲ್ಲಿ ನಾಗರಿಕ ರಾಷ್ಟ್ರೀಯತೆ ಪ್ರಜ್ಞೆ ಸ್ಥಾಪನೆಯಾಗುವುದಿಲ್ಲವೋ ಅಲ್ಲಿ ಮಾತ್ರ ನಿರಂಕುಶ ರಾಷ್ಟ್ರೀಯವಾದ ತನ್ನ ಅಸ್ತಿತ್ವ ಸ್ಥಾಪಿಸುತ್ತದೆ ಎಂದೂ ಸಹ ವಾದಿಸಲಾಗುತ್ತದೆ. ಈ ಕಾರಣಕ್ಕಾಗಿ ಪೂರ್ವ ಯುರೋಪ್ ಭಾಗದಲ್ಲಿ ಜನಾಂಗೀಯ ರಾಷ್ಟ್ರೀಯವಾದ ಸಮೃದ್ಧವಾಗಿ ಎದ್ದು ಕಾಣುತ್ತಿದೆ. ಏಕೆಂದರೆ ನಲವತ್ತು ವರ್ಷಗಳ ಏಕಪಕ್ಷೀಯ ಕಮ್ಯೂನಿಸ್ಟ್ ಪಾರ್ಟಿಯ ಆಡಳಿತ ಒಂದು ಕಾಲದಲ್ಲಿ ಅಲ್ಲಿ ಇದ್ದ ಅಲ್ಪಸ್ವಲ್ಪ ನಾಗರಿಕ ಅಥವಾ ಪ್ರಜಾತಾಂತ್ರಿಕ ಸಂಸ್ಕೃತಿಯನ್ನು ಸಂಪೂರ್ಣ ನಿರ್ನಾಮಗೊಳಿಸಿದೆ. ಒಂದು ವೇಳೆ ಇದು ನಿಜವೇ ಆಗಿದ್ದಲ್ಲಿ ಜನಾಂಗೀಯ ರಾಷ್ಟ್ರೀಯತೆಯು ಪ್ರಜಾತಾಂತ್ರಿಕ ಸಂಪ್ರದಾಯಗಳಿಂದಾಗಿ ಸಮಾಜದಲ್ಲಿ ಆಳವಾಗಿ ಬೇರು ಬಿಡುವುದಿಲ್ಲ ಎನ್ನುವುದು ನಿಜ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ದುರದೃಷ್ಟವೆಂದರೆ

ಇಲ್ಲಿ ಹೀಗೆ ಆಗಿಲ್ಲ. ಯುರೋಪಿಯನ್ ಜನಾಂಗೀಯತೆ ಶ್ವೇತ ಜನಾಂಗೀಯ ರಾಷ್ಟ್ರೀಯತೆಯ ಸ್ವರೂಪದಲ್ಲಿದ್ದು ನಾಗರಿಕತ್ವವನ್ನು ಆಧರಿಸಿದ ರಾಷ್ಟ್ರೀಯತೆ ಆಗಿರದೆ ಜನಾಂಗೀಯತೆಯ ಆಧಾರದ ರಾಷ್ಟ್ರೀಯತೆಯ ಸ್ವರೂಪ ಪಡೆದಿದೆ. ಬ್ರಿಟನ್, ಇಟಲಿ, ಫ್ರಾನ್ಸ್, ಜರ್ಮನ್ ಮತ್ತು ಸ್ಪೇನ್ ಅಂತಹ ರಾಷ್ಟ್ರಗಳಲ್ಲಿ ಇದರ ವಿರುದ್ಧ ಸಂಘರ್ಷಕ್ಕೆ ನೆಲೆ ಲಭಿಸುತ್ತಿದೆ.

ಇದಕ್ಕೆ ಇನ್ನೂ ಸಾಕಷ್ಟು ಉದಾಹರಣೆಗಳ ಪಟ್ಟಿಯೇ ಇದೆ. ಉತ್ತರ ಐರ್ಲೆಂಡ್, ಭಾರತ ಮತ್ತು ಕೆನಡಾಗಳನ್ನು ಹೆಸರಿಗೆ ಮಾತ್ರ ಈ ಮೂರು ದೇಶಗಳನ್ನು ತೆಗೆದುಕೊಳ್ಳಲಾಗಿದೆ. ಇಲ್ಲಿ ಜನಾಂಗೀಯ ರಾಷ್ಟ್ರೀಯತೆಯು ಅಲ್ಲಿನ ರಾಜ್ಯಗಳಲ್ಲಿ ಢಾಳಾಗಿ ಕಾಣಿಸಿಕೊಳ್ಳುತ್ತಿದೆ. ಅಲ್ಲಿ ಮೊದಲು ನಾಗರಿಕ ಪ್ರಜಾಪ್ರಭುತ್ವವಿತ್ತು. ಉತ್ತರ ಐರ್ಲೆಂಡ್‌ನಲ್ಲಿ ೧೯೨೦ರಿಂದ ೧೯೭೨ವರೆಗಿನ ಕಾಲಘಟ್ಟದಲ್ಲಿ ಲಾಯಲಿಸ್ಟ್ ಪ್ರಾಟೆಸ್ಟಂಟ್ ಬಹುಮತವು ಬ್ರಿಟಿಷ್ ಸಂಸದೀಯ ವ್ಯವಸ್ಥೆಯನ್ನು ಅಲ್ಪಸಂಖ್ಯಾತ ಕ್ಯಾಥೋಲಿಕರ ಮೇಲಿನ ವ್ಯವಸ್ಥಿತ ದೌರ್ಜನ್ಯಕ್ಕೆ ಬಳಸಿಕೊಂಡಿತು. ಬ್ರಿಟಿಷ್ ಪ್ರಜಾತಾಂತ್ರಿಕ ವ್ಯವಸ್ಥೆ ಮತ್ತು ಕಾಯ್ದೆಗೆ ಒಳಪಟ್ಟಿದ್ದರೂ ಸಹ ರಾಷ್ಟ್ರೀಯತೆಗೆ ಅನುಗುಣವಾಗಿ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಲಾಯಲಿಸ್ಟ್‌ಗಳು ತಿರುಚುವ ಕೆಲಸ ನಿಲ್ಲಿಸಲಿಕ್ಕಾಗಲಿಲ್ಲ. ಭಾರತದಲ್ಲಿ, ಭಾರತದ ಒಕ್ಕೂಟ ವ್ಯವಸ್ಥೆಯನ್ನು ಎರಡು ಭಾಗಗಳಾಗಿ ತುಂಡರಿಸುತ್ತಿರುವ ಇಂದಿನ ಜನಾಂಗೀಯ ಮತ್ತು ಧಾರ್ಮಿಕ ರಾಷ್ಟ್ರೀಯತಾವಾದಕ್ಕೆ ೪೫ ವರ್ಷಗಳ ನಾಗರಿಕ ರಾಷ್ಟ್ರೀಯತಾವಾದ ತಡೆ ಒಡ್ಡಲಿಕ್ಕಾಗಲಿಲ್ಲ. ಕೆನಡಾದಲ್ಲಿ ಈ ಚಿತ್ರಣ ಇನ್ನಷ್ಟು ಆಶಾದಾಯಕವಾಗಿದೆ ಆದರೆ ವಿಮರ್ಶಾತ್ಮಕ ಅಂಶಗಳು ಒಂದೇ ಆಗಿವೆ. ಪ್ರಜಾತಾಂತ್ರಿಕ ಒಕ್ಕೂಟ ವ್ಯವಸ್ಥೆಯನ್ನು ಪೂರ್ಣ ಪ್ರಮಾಣದಲ್ಲಿ ಅಳವಡಿಸಿಕೊಂಡಿದ್ದರೂ ಸಹ ಕ್ಯೂಬೆಕ್‌ನ ರಾಷ್ಟ್ರೀಯವಾದದ ಅಲೆಯನ್ನು ಇಲ್ಲಿಯವರೆಗೆ ತಡೆಯಲಿಕ್ಕಾಗಿಲ್ಲ.

ಈ ಎಲ್ಲ ಪ್ರದೇಶಗಳಲ್ಲಿ ಜನಾಂಗೀಯ ರಾಷ್ಟ್ರೀಯವಾದದ ಹಿಂದೆ ಇರುವ ಮೂಲಭೂತ ತರ್ಕ ಎಂದರೆ ವೈರಿಗಳನ್ನು ಹದ್ದುಬಸ್ತಿನಲ್ಲಿಡಲು ಮತ್ತು ತಮ್ಮ ಸಾಂಸ್ಕೃತಿಕ ಪರಂಪರೆ ಬುಡಮೇಲಾಗುವುದನ್ನು ತಡೆಯಲು ಬಹುಸಂಖ್ಯಾತ ಜನಾಂಗೀಯ ಆಡಳಿತ ಇರಬೇಕು ಎನ್ನುವುದು. ಪೂರ್ವ ಯುರೋಪ್‌ನ ರಾಷ್ಟ್ರಗಳಲ್ಲಿ ಜನಾಂಗೀಯ ರಾಷ್ಟ್ರೀಯವಾದ ಇನ್ನೂ ಅಧಿಕವಾದುದನ್ನು ಪ್ರತಿಪಾದಿಸುತ್ತದೆ. ಸೋವಿಯತ್ ಸಾಮ್ರಾಜ್ಯ ಮತ್ತು ಅದರ ಬೆಂಬಲಿಗ ಆಡಳಿತ ವ್ಯವಸ್ಥೆ ಕುಸಿದ ಮೇಲೆ ರಾಷ್ಟ್ರ- ರಾಜ್ಯಗಳ ವ್ಯವಸ್ಥಾಸೌಧ ಕೂಡ ಕುಸಿದು ನೂರಾರು ಜನಾಂಗಗಳನ್ನು ಪರಸ್ಪರರ ದಯೆ ಕರುಣೆಯ ಮೇಲೆ ಬಿಟ್ಟು ಬಿಟ್ಟಿತು. ಏಕೆಂದರೆ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಮಾತುಕತೆಯ ಮೂಲಕ ತಮ್ಮ ಭಿನ್ನಾಭಿಪ್ರಾಯಗಳನ್ನು ಬಗೆ ಹರಿಸಿಕೊಳ್ಳುವ ಕಿಂಚಿತ್ ಅನುಭವ ಈ ಸಮುದಾಯಗಳಲ್ಲಿ ಯಾರೊಬ್ಬರಲ್ಲಿಯೂ ಇರಲಿಲ್ಲ. ಹೀಗಾಗಿ ಬಲಪ್ರಯೋಗ ಅಥವಾ ಹಿಂಸೆಯೊಂದೇ ಇಲ್ಲಿ ತೀರ್ಪುಗಾರನಾಗಿಬಿಟ್ಟಿತು.

ರಾಷ್ಟ್ರೀಯತೆ ಕುರಿತಾದ ಸುಂದರ ಶಬ್ದಗಳ ಭಾಷಣ ಇಡೀ ಪ್ರದೇಶವನ್ನು ಕಾಳ್ಗಿಚ್ಚಿನಂತೆ ಆವರಿಸಿತು. ಸೇನಾಧಿಪತಿಗಳಿಗೆ ಮತ್ತು ಬಂದೂಕುಧಾರಿಗಳಿಗೆ ಇದು ತಮ್ಮ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಅವಕಾಶವಾದಿ ಸ್ವಸಮರ್ಥನೆಯ ಪದಸಂಪತ್ತನ್ನು ನೀಡಿತು. ಭಯ ಭೀತಿಗಳು ಕಮ್ಯೂನಿಸ್ಟ್ ಪಳೆಯುಳಿಕೆಗಳ ರಾಜ್ಯಗಳ ಮೇಲೆ ಬೀಸಿದ್ದರ ಪರಿಣಾಮ ಜನರು ಆಗ ಮತ್ತೆ ಕೇಳಿದ್ದು ಒಂದೇ ಪ್ರಶ್ನೆ, ನನ್ನ ರಕ್ಷಣೆಯ ಹೊಣೆ ಈಗ ಯಾರದ್ದು? ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಜರ್ಜರಿತಗೊಂಡ ಜನ ಯಾರನ್ನು ನಂಬಬೇಕು ಮತ್ತು ನಮ್ಮವರೆಂದು ಯಾರನ್ನು ಕರೆಯುವುದು ಎನ್ನುವ ಪ್ರಶ್ನೆ ಬೃಹದಾಕಾರವಾಗಿ ಬೆಳೆದು ನಿಂತಿತ್ತು. ಇದಕ್ಕೆ ಜನಾಂಗೀಯ ರಾಷ್ಟ್ರೀಯವಾದ ತನ್ನ ಜನರನ್ನು ಮಾತ್ರ ನಂಬಬೇಕು ಎಂದು ಸ್ಪಷ್ಟ ಉತ್ತರ ಒದಗಿಸಿತು.

## ಸಿಂಧುತ್ವ (ಸಹೋದರತ್ವ)

ರಕ್ತ ನಿಷ್ಠೆಗೆ ರಾಷ್ಟ್ರೀಯತೆಯ ಪ್ರಜ್ಞೆಯು ತನ್ನ ಅಧಿಕೃತ ಮುದ್ರೆಯೊತ್ತಿದ್ದಲ್ಲಿ ಅದಕ್ಕೆ ಪ್ರತಿಫಲವಾಗಿ ರಕ್ತವೇ ತರ್ಪಣಗೊಳ್ಳುತ್ತದೆ. ಜನರಲ್ಲಿನ ಅತ್ಯುತ್ತಮ ಗುಣಗಳನ್ನು ಆಧಾರವಾಗಿಟ್ಟುಕೊಂಡು ಇಂತಹದ್ದೊಂದು ಅತ್ಯಾಕರ್ಷಣೆಯ ಕರೆ ನೀಡುವುದಕ್ಕೆ ರಾಷ್ಟ್ರೀಯತೆಯ ಪ್ರಜ್ಞೆ ಸಿದ್ಧಗೊಳ್ಳುತ್ತದೆಯೇ ವಿನಾ ಅವರಲ್ಲಿನ ದುರ್ಬುದ್ಧಿಯ ಗುಣಗಳ ಮೇಲಲ್ಲ. ಮನುಷ್ಯನೊಬ್ಬನ ಹತ್ಯೆಯನ್ನು ಅಷ್ಟು ಸುಲಭವಾಗಿ ಅರಗಿಸಿಕೊಳ್ಳಲಿಕ್ಕಾಗುವುದಿಲ್ಲ. ಹೀಗಾಗಿ ಅಂತಹ ಕೊಲೆಯೊಂದರ ಹಿಂದೆ ಒಂದು ಕಾರಣ ಹುಟ್ಟುಹಾಕಬೇಕು. ಆ ಕಾರಣ ಒಳ್ಳೆಯದು ಉದಾತ್ತವಾದುದು ಎನ್ನುವ ಭಾವನೆ ಆ ದುಷ್ಕರ್ಮಿಯಲ್ಲಿ ಮೊದಲು ಮೂಡಬೇಕು. ಒಂದು ವೇಳೆ ಹಿಂಸೆಗೆ ಅಧಿಕೃತ ಮುದ್ರೆಯನ್ನು ಒತ್ತುವುದೇ ಆದಲ್ಲಿ ಎಲ್ಲ ಜನಸಮುದಾಯದ ಹಿತರಕ್ಷಣೆಯ ಹೆಸರಿನಲ್ಲಿ ನಡೆಯಬೇಕು. ತಾಯ್ನೆಲದ ಪ್ರೀತಿಗಿಂತ ಅಧಿಕವಾದುದು ಯಾವುದಿದೆ?

ರಾಷ್ಟ್ರೀಯತಾವಾದಿಗಳು ಸೂಕ್ಷ್ಮ ಭಾವನಾಜೀವಿಗಳು. ಜನಾಂಗೀಯ ಸಂಪೂರ್ಣ ನಿರ್ಮೂಲನೆ ಮಾಡುವವನಿಗೆ ಬೆಡಗು ಬಿನ್ನಾಣಗಳು ಸಹಜವಾಗಿಬಿಡುತ್ತವೆ. ಚೌಕಿಯ ಎರಡೂ ಬದಿಗೆ ನಿಂತಿರುವ ಇಬ್ಬರು ಕೊಲೆಗಡುಕರೂ ಸಹ ತನ್ನ ವೈರಿಯತ್ತ ಗುಂಡು ಹಾರಿಸುವ ಮುನ್ನ ಉತ್ಕಂಠತೆಯ ಹಾಡೊಂದನ್ನೋ ಅಥವಾ ಜನಾಂಗಕ್ಕೆ ಸಂಬಂಧಿಸಿದ ಕಾವ್ಯದಲ್ಲಿನ ಒಂದು ಪದ್ಯವನ್ನೋ ಒಮ್ಮೆಯಾದರೂ ಹೇಳಿಕೊಳ್ಳದೇ ಇರುವುದಿಲ್ಲ. ಬುದ್ಧಿಗಿಂತ ಪ್ರೀತಿ ಮುಖ್ಯ, ಅದು ಸಂಕಲ್ಪಕ್ಕಿಂತಲೂ ಬಲಯುತವಾದುದು, ಆ ಪ್ರೀತಿ ವಿಧಿ ದೈವ ನಿಯಾಮಕತೆಗಳಿಗೆ ಮೀಸಲಾದುದು ಎಂದು ನಂಬಿ ಮನಗಾಣಿಸುವುದು ಇಂತಹ ಭಾವನಾತ್ಮಕತೆಯ ಗುಪ್ತ ಉದ್ದೇಶವಾಗಿರುತ್ತದೆ. ಇಂತಹ ಪ್ರೀತಿ ದೈವನಿಯಾಮಕತೆಯನ್ನು ನಂಬುವಂತೆ ಮಾಡುತ್ತದಾದರೂ ಅದೊಂದು

ದುರ್ಭಾಗ್ಯದ ಸಂಗತಿಯಾಗಿದೆ, ಏಕೆಂದರೆ ಅದು ನಿಮ್ಮನ್ನು ಕೊಲ್ಲುವಂತೆ ಪ್ರೇರೇಪಿಸುತ್ತದೆ.

ಇಂತಹ ಭಾವನಾತ್ಮಕತೆಗಳಿಂದ ಹೊರಬಂದ ಮೇಲೆ ಈ ಸಹೋದರತ್ವ ಅನ್ನುವುದು ಏನು ಮತ್ತು ಅದರ ಅಗತ್ಯವಾದರೂ ಏನು, ಯಾವ ರಾಷ್ಟ್ರೀಯತೆ ಇದನ್ನು ಅಷ್ಟೊಂದು ಯಶಸ್ವಿ ಎನ್ನುವಂತೆ ಸಾಧಿಸಿದೆ ಎಲ್ಲ ಬಂಧುತ್ವಗಳಿಗಿಂತ ನಾವು ಎಲ್ಲರೂ ಒಂದೇ ದೇಶಕ್ಕೆ ಸೇರಿದವರು ಎನ್ನುವ ಭಾವನೆ ಅತ್ಯುನ್ನತವಾದುದು ಎಂದು ರಾಷ್ಟ್ರೀಯವಾದಿಗಳು ಸಾರಿ ಹೇಳುವ ವೇಳೆ ನಿಮ್ಮ ಕುಟುಂಬ, ಕೆಲಸ ಅಥವಾ ಸ್ನೇಹಿತರು, ಬಂಧುಬಳಗ ಎನ್ನುವುದೆಲ್ಲವೂ ನಗಣ್ಯ ಎಂಬರ್ಥ ನೀಡಿ, ನಿಮ್ಮನ್ನು ನೀವು ರಕ್ಷಿಸಿಕೊಳ್ಳಲು ರಾಷ್ಟ್ರವೊಂದು ಬೇಕು ಮತ್ತದರಿಂದ ಅವರೆಲ್ಲರೂ ಕೂಡ ಸುರಕ್ಷಿತವಾಗಿರುತ್ತಾರೆ ಎಂದು ವ್ಯಾಖ್ಯಾನಿಸುತ್ತಾರೆ. ಇದೇ ವಿಚಾರ ರಾಷ್ಟ್ರಕ್ಕಾಗಿ ಬಲಿದಾನಕ್ಕೆ ಸಿದ್ಧಗೊಳ್ಳುವಂತೆ ಕರೆ ನೀಡುತ್ತದೆ. ರಾಷ್ಟ್ರ ರಕ್ಷಣೆ ಇಲ್ಲದೇ ವ್ಯಕ್ತಿಯೊಬ್ಬನು ಜೀವನದಲ್ಲಿ ಅಳವಡಿಸಿಕೊಂಡಿರುವ ಎಂತಹದ್ದೆ ಮೌಲ್ಯಗಳಿಗೆ ಬೆಲೆ ಇಲ್ಲ. ಹೀಗಾಗಿ ಹಿಂಸೆಯಿಂದ ರಕ್ಷಿಸಿಕೊಳ್ಳುವುದಕ್ಕೆ ಬಂಧುತ್ವದ ಭಾವನೆ ಇರಲೇಬೇಕು ಎಂದು ಹೇಳುತ್ತದೆ. ನೀವು ಯಾರಿಗೆ ಸೇರಿರುತ್ತಿರೋ ಅಲ್ಲಿದ್ದರೆ ಮಾತ್ರ ನೀವು ಸುರಕ್ಷಿತವಾಗಿರುತ್ತೀರಿ ಮತ್ತು ನೀವು ಎಲ್ಲಿಯವರಾಗಿರುತ್ತಿರೋ ಅಲ್ಲಿಯೇ ನಿಮ್ಮ ಸುರಕ್ಷತೆ. ಒಂದು ವೇಳೆ ರಾಷ್ಟ್ರೀಯತೆಯು ಹಿಂಸೆಗೆ ಒತ್ತು ನೀಡುತ್ತದೆ ಎನ್ನುವ ಕಾರಣಕ್ಕೆ ಆಕರ್ಷಣೀಯ ಎಂದಾದಲ್ಲಿ ಅದೇ ಸಮಯದಲ್ಲಿ ಹಿಂಸೆಯಿಂದ ನಮಗೆ ರಕ್ಷಣೆ ಒದಗಿಸುತ್ತದೆ ಎನ್ನುವ ಕಾರಣಕ್ಕೂ ಪ್ರಾಮುಖ್ಯ ಪಡೆದುಬಿಡುತ್ತದೆ. ಇಲ್ಲಿ ಸೇನಾಧಿಪತಿಯು ತನ್ನ ಜನರ ಸಂರಕ್ಷಕನಾಗಿ ಬಿಡುತ್ತಾನೆ. ಒಂದು ವೇಳೆ ಅವನು ಕೊಲೆ ಮಾಡಿದರೂ ಸಹ ಅದು ಒಂದು ಉದಾತ್ತ ವಿಚಾರಕ್ಕೆ ಮಾಡಿದ ಕೃತ್ಯ ಅಂದರೆ ಮುಗ್ಧ ಜನರ ಸಂರಕ್ಷಣೆಗೆ ಮಾಡಿದ್ದು ಎಂದು ಬಿಂಬಿತವಾಗಿಬಿಡುತ್ತದೆ.

ಸೋದರತ್ವ ಎಂದರೆ ಇಲ್ಲಿ ತಮ್ಮನ್ನು ತಾವು ಒಂದು ಸಮುದಾಯ ಅಥವಾ ಜನಾಂಗದೊಂದಿಗೆ ಗುರುತಿಸಿಕೊಳ್ಳುವುದು ಮತ್ತು ಅರ್ಥ ಮಾಡಿಕೊಳ್ಳುವುದು ಆಗಿದೆ. `ಟು ಕಾನ್ಸೆಪ್ಟ್ ಆಫ್ ಲಿಬರ್ಟಿ'ಯಲ್ಲಿ ಇಸೈಯ ಬರ್ಲಿನ್ ಹೇಳಿಕೊಂಡಿರುವಂತೆ, "ನಾನು ನನ್ನವರೊಟ್ಟಿಗೆ ಇದ್ದಾಗ, ನಾನು ಹೇಗೆ ಅವರನ್ನು ಅರ್ಥ ಮಾಡಿಕೊಂಡಿದ್ದೆನೋ ಅದೇ ರೀತಿ ಅವರೂ ಸಹ ನನ್ನನ್ನು ಅರಿತುಕೊಂಡಿದ್ದಾರೆ. ಈ ಒಬ್ಬರಿಗೊಬ್ಬರು ಅರ್ಥ ಮಾಡಿಕೊಳ್ಳುವಿಕೆಯೇ ನಮ್ಮಲ್ಲಿ ಹುಟ್ಟು ಹಾಕುವ ಸಹೋದರತ್ವದ ಕಲ್ಪನೆ ಜಗತ್ತಿನಲ್ಲಿ ನನ್ನವರೆನ್ನುವರು ಯಾರಾದರೂ ಒಬ್ಬರಿದ್ದಾರೆ ಎನ್ನುವ ಭಾವನೆ ಬೆಳೆಯುವಂತೆ ಮಾಡುತ್ತದೆ." ಈ ಸಹೋದರತ್ವದ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕಾದಲ್ಲಿ ಮೊದಲು ನೀವು ವಾಸಿಸುವ ಪ್ರದೇಶದ ಜನರ ನಡೆ-ನುಡಿ ಅನುಕ್ತ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಿಮ್ಮ ಬಗ್ಗೆ ನೀವು ಏನೂ ಹೇಳಿಕೊಳ್ಳದೇ ಅಲ್ಲಿನ ಜನರು ನಿಮ್ಮನ್ನು ಅರ್ಥ ಮಾಡಿಕೊಂಡು

ಬಿಡುತ್ತಾರೆ. ಸಂಕ್ಷಿಪ್ತವಾಗಿ ಹೇಳಬೇಕು ಎಂದರೆ `ನಿನ್ನ ಭಾಷೆಯಲ್ಲಿ ಮಾತನಾಡು' ಎಂದು ಹೇಳಿಬಿಡುತ್ತಾರೆ. ಕಾಕತಾಳೀಯ ಎನ್ನುವಂತೆ ಇದೇ ಕಾರಣಕ್ಕೆ ರಾಷ್ಟ್ರ ಭಾಷೆಯ ಸಂರಕ್ಷಣೆಯು ರಾಷ್ಟ್ರೀಯತೆಯ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ನೆಲ ಮತ್ತು ಇತಿಹಾಸಕ್ಕಿಂತ ಮಿಗಿಲಾಗಿ ಭಾಷೆಯೊಂದು ಸಹೋದರತ್ವದ ಭಾವನೆ ಹುಟ್ಟುಹಾಕುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ನಿಸ್ಸಂಶಯವಾಗಿ ತಾಯ್ನೆಲದ ಆಚೆ ಬೇರೆ ದೇಶಗಳಲ್ಲಿಯೂ ಕೂಡ ವ್ಯಕ್ತಿಗೆ ಭಾಷೆಯ ಆಧಾರದ ಮೇಲೆ ಇದನ್ನು ಕಂಡುಕೊಳ್ಳುತ್ತಾನೆ, ದೇಶಭ್ರಷ್ಟನಾದ ವ್ಯಕ್ತಿಯೂ ಈ ಭ್ರಾತೃತ್ವದ ನೆಲೆಯನ್ನು ಕಂಡುಕೊಳ್ಳಬಲ್ಲ. ಆದರೆ ರಾಷ್ಟ್ರೀಯವಾದಿಗಳ ವಾದವೇ ಬೇರೆ. ಅವರ ಪ್ರಕಾರ ಪರಿಪೂರ್ಣ ಭ್ರಾತೃತ್ವ ಎಂದರೆ ಆ ಸಹೋದರತ್ವದ ಭಾವನೆ ಕೇವಲ ಮಾತಿಗೆ ಸಿಮೀತವಾಗಿರದೇ ಕೃತಿಯಲ್ಲೂ ವ್ಯಕ್ತಗೊಳ್ಳಬೇಕು. ಈ ರೀತಿಯ ಭಾವನೆ ಕೇವಲ ತಾಯ್ನೆಲದಲ್ಲಿ ತನ್ನವರೊಂದಿಗೆ ಇದ್ದಾಗ ಮಾತ್ರ ಮೂಡಲು ಸಾಧ್ಯ ಮತ್ತು ಕೃತಿಯಲ್ಲೂ ವ್ಯಕ್ತಗೊಳ್ಳಲು ಸಾಧ್ಯವೆನ್ನುತ್ತಾರೆ.

## ವಿಶ್ವಬಂಧುತ್ವ (ಕಾಸ್ಮೋಪಾಲಿಟನಿಸಂ) ಮತ್ತು ಅದರ ಪ್ರಯೋಜನಗಳು

ರಷ್ಯನ್ ಮೂಲದ ತಂದೆ, ಇಂಗ್ಲೆಂಡ್ ಮೂಲದ ತಾಯಿಯಿಂದ ಜನಿಸಿದ ಒಬ್ಬ ವ್ಯಕ್ತಿಯ ಶಿಕ್ಷಣ ಅಮೆರಿಕದಲ್ಲಿ ಮತ್ತು ವೃತ್ತಿ ಜೀವನದ ಕಾಲಘಟ್ಟ ಕೆನಡಾ, ಗ್ರೇಟ್ ಬ್ರಿಟನ್, ಫ್ರಾನ್ಸ್‌ಗಳಲ್ಲಿ ಕಳೆದಿದ್ದಲ್ಲಿ ಅಂತಹ ವ್ಯಕ್ತಿಯಿಂದ ಜನಾಂಗೀಯ ರಾಷ್ಟ್ರೀಯತೆಯನ್ನು ಅಷ್ಟೊಂದು ದೊಡ್ಡ ಮಟ್ಟಿಗೆ ನಿರೀಕ್ಷಿಸಲಿಕ್ಕಾಗುವುದಿಲ್ಲ. ನಾನೊಬ್ಬ ವಿಶ್ವಬಂಧು (ಕಾಸ್ಮೋಪಾಲಿಟನ್) ಎಂದು ಯಾರಾದರೂ ಸಾರಿ ಹೇಳುತ್ತಿದ್ದಲ್ಲಿ ಅದು ನಾನೇ ಆಗಿರಬೇಕು. ನಾನು ಈಗ ಮಾತನಾಡುವುದಕ್ಕಿಂತ ಇನ್ನೂ ಹೆಚ್ಚು ಭಾಷೆಗಳಲ್ಲಿ ಮಾತನಾಡುವುದಕ್ಕೆ ಬಯಸುತ್ತೇನೆ. ಈಗಾಗಲೇ ನಾನು ವಾಸಿಸಿದ ದೇಶಗಳಿಗಿಂತ ಇನ್ನೂ ಒಂದಿಷ್ಟು ದೇಶಗಳಲ್ಲಿ ವಾಸಿಸುವಂತಾಗಿದ್ದರೆ, ದೇಶಭ್ರಷ್ಟಗೊಳ್ಳುವುದು ಪರದೇಶಿತನ ಅಲ್ಲ ಎಂದು ಇನ್ನೂ ಅನೇಕರು ಅರಿತುಕೊಂಡಿದ್ದಲ್ಲಿ; ಆಗ ಈ ನನ್ನದು ನಮ್ಮವರೆನ್ನುವ ಭಾವನೆ ವಂಶಪಾರಂಪರ್ಯವಾಗದೇ ನಾವೇ ಆಯ್ದುಕೊಂಡ ತಾಯ್ನೆಲ ಎಂಬ ಭಾವ ಮೂಡುತ್ತದೆ.

ಹಲವಾರು ವರ್ಷಗಳವರೆಗೆ ನನ್ನಂತಹ ಕಾಸ್ಮೋಪಾಲಿಟನ್‌ಗಳ ಪರವಾಗಿ ಅಲೆಯೊಂದು ಬೀಸುತ್ತಿದೆ ಎಂಬ ನಂಬಿಕೆ ನನ್ನಲ್ಲಿ ಮೂಡಿತ್ತು. ನಮ್ಮಂತಹ ಅನೇಕರು ಅದನ್ನು ನೋಡಿದ ಹಾಗೆಯೂ ಇತ್ತು. ಕನಿಷ್ಠ ಏನಿಲ್ಲವೆಂದರೂ ಡಜನ್ ಅಷ್ಟಾದರೂ ಇರುವ ಬೃಹತ್, ಬಹು ಜನಾಂಗೀಯ ಜಾಗತಿಕ ನಗರಗಳು ದೇಶಭ್ರಷ್ಟರಿಗೆ, ಪಲಾಯನಗೊಂಡವರಿಗೆ, ವಲಸಿಗರು ಮತ್ತು ಎಲ್ಲ ರೀತಿಯ ಪ್ರವಾಸಿಗರಿಗೆ ನೆಲೆ ಒದಗಿಸಿವೆ. ಪ್ರಮುಖ ನಗರಗಳಲ್ಲಿರುವ ಜೀವನವನ್ನು ವೃತ್ತಿ, ಕೆಲಸವನ್ನಾಗಿಸಿಕೊಂಡಿರುವ ಜನಸಂಖ್ಯೆಯ ಒಂದು ಭಾಗ ರಾಷ್ಟ್ರವನ್ನು ಕುರಿತು ತೀರ ಹಗುರ ಮಾನಸಿಕತೆ ಬೆಳೆಸಿಕೊಂಡಿವೆ. ಈ ಜನಗಳು ತಾವು ಕೆಲಸ ಮಾಡುತ್ತಿರುವವರ ಅಥವಾ ಯಾರೊಂದಿಗೆ ವಾಸ

ಮಾಡುತ್ತಿರುತ್ತಾರೋ ಅವರ ಪಾಸ್‌ಪೋರ್ಟ್, ಅವರ ದೇಶ, ಹಿನ್ನೆಲೆಯ ಬಗ್ಗೆ ಕಿಂಚಿತ್ ವಿಚಾರ ಮಾಡುವುದಿಲ್ಲ. ತಾವು ಖರೀದಿಸಿದ ವಸ್ತುಗಳ ದೇಶದ ಮೂಲ ಯಾವುದು ಎನ್ನುವುದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ತಮ್ಮ ಜೀವನ ರೂಪಿಸಿಕೊಳ್ಳುವ ಸಂದರ್ಭದಲ್ಲಿ ತಮ್ಮ ಅಚ್ಚುಮೆಚ್ಚಿನ ಪ್ರತಿಯೊಂದು ದೇಶದಿಂದ ತಮಗೆ ಬೇಕಾಗಿರುವ ಸಂಪ್ರದಾಯಗಳನ್ನು ಎರವಲು ಪಡೆಯುತ್ತಾರೆ. `ಒಂದು ರೀತಿಯಲ್ಲಿ ಈ ಕಾಸ್ಮೋಪಾಲಿಟನ್‌ಗಳು ಸಾಂಸ್ಕೃತಿಕ ಎರವಲಿನಲ್ಲಿ ಒಂದು ಧನಾತ್ಮಕ ನೈತಿಕ ಮೌಲ್ಯವನ್ನು ಸೇರಿಸುತ್ತಾರೆ'. ಸಂಸ್ಕೃತಿಯಲ್ಲಿ ಸಗೋತ್ರಕ್ಕಿಂತ ಅನ್ಯಗೋತ್ರ ವಿವಾಹ ಉತ್ತಮವಾದುದು ಅದೇ ರೀತಿ ಪ್ರಾಂತೀಯತೆಗಿಂತ ಕಲಬೆರಕೆ ಉತ್ತಮವಾದುದು.

ಈ ವಿಶ್ವ ಬಂಧುತ್ವದ ನೈತಿಕತೆಯಲ್ಲಿ ಹೊಸತು ಅನ್ನುವುದು ಏನೂ ಇಲ್ಲ. ಕ್ರಿ.ಶ. ೧೭೦೦ರಿಂದ ನಾವು ಜಾಗತಿಕ ಅರ್ಥ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ. ಮೊಟ್ಟ ಮೊದಲನೆಯದಾಗಿ ಇದು ಸಾಮಾಜಿಕ ಮತ್ತು ಜನಾಂಗೀಯ ಪ್ರಸರಣ ಆಗಿದೆ. ಶತಶತಮಾನಗಳಿಂದ ಜಗತ್ತಿನ ಅನೇಕ ಪ್ರಮುಖ ನಗರಗಳು ಜಗತ್ತಿಗೆ ತಮ್ಮ ಬಾಗಿಲು ತೆರೆದಿಟ್ಟಿವೆ. ೧೭೭೬ರಲ್ಲಿಆಸುಪಾಸಿನಲ್ಲಿ ರಾಷ್ಟ್ರೀಯತಾವಾದ ಬೆಳೆಯಲು ಆರಂಭಿಸಿದ ಕಾಲಘಟ್ಟದಲ್ಲಿ ಪ್ರಥಮ ಬಾರಿಗೆ ಆಡಮ್ ಸ್ಮಿಥ್ ಲೋಕೋತ್ತರ ಸಿದ್ಧಾಂತದ ಅನಂತರ ಜಾಗತಿಕ ಮಾರುಕಟ್ಟೆ ವ್ಯವಸ್ಥೆಯು ದೇಶಗಳ ಸಾರ್ವಭೌಮತೆಯ ಮೇಲೆ ಮತ್ತು ರಾಜತಾಂತ್ರಿಕ ತಂತ್ರಗಳ ಮೇಲೆ ಮಿತಿ ಹೇರಿದೆ ಎಂದು ಪ್ರತಿಪಾದಿಸಿದರು. ಕನಿಷ್ಠ ಏನಿಲ್ಲವೆಂದರೂ ಗಣರಾಜ್ಯ ವ್ಯವಸ್ಥೆ ರೂಪುಗೊಳ್ಳಲು ಆರಂಭಿಸಿದ ಅನಂತರ ಜಾಗತಿಕ ಮಾರುಕಟ್ಟೆಯು ಪರಿಕಲ್ಪನೆಗಳಲ್ಲಿ ಮತ್ತು ಸಾಂಸ್ಕೃತಿಕ ಸ್ವರೂಪದಲ್ಲಿ ಅಸ್ತಿತ್ವ ಪಡೆದುಕೊಂಡಿತು. ಬೇರುಗಳಿಲ್ಲದೇ ವಿಶ್ವ ಬಂಧುತ್ವ ಸಾಮ್ರಾಜ್ಯಶಾಹಿ ವ್ಯವಸ್ಥೆಯ ನಗರಗಳಲ್ಲಿ ಒಂದು ಸಾಮಾಜಿಕ ವ್ಯವಸ್ಥೆಯಾಗಿ ಶತಮಾನದಿಂದ ಅಸ್ತಿತ್ವ ಪಡೆದುಕೊಂಡಿತ್ತು.

ದೊಡ್ಡ ನಗರಗಳಲ್ಲಿನ ನಮ್ಮ ಕಾಲದ ವಿಶ್ವಬಂಧುತ್ವಕ್ಕೆ (ಕಾಸ್ಮೋಪಾಲಿಟನ್ ಸಂಸ್ಕೃತಿ) ಮತ್ತು ಅದಕ್ಕಿಂತ ಮುಂಚಿನದರ ನಡುವಿನ ಭಿನ್ನತೆಗೆ ಎರಡು ವೈಶಿಷ್ಟ್ಯಗಳಿವೆ. ಮೊಟ್ಟಮೊದಲನೆಯದಾಗಿ ಇದು ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಸರಣ. ೨೦ನೇ ಶತಮಾನದ ಪ್ರಜಾತಾಂತ್ರಿಕ ವ್ಯವಸ್ಥೆ ಮತ್ತು ಯುದ್ಧಾನಂತರದ ಅಭೂತಪೂರ್ವ ಸಮೃದ್ಧತೆಯಿಂದಾಗಿ ವಿಶ್ವ ಬಂಧುತ್ವದ ಪ್ರಯೋಜನಗಳು ಶ್ವೇತವರ್ಣಿಯ ಉಚ್ಚವರ್ಗದಿಂದ ಹಿಡಿದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಅಲ್ಪಸಂಖ್ಯಾತ ಸಮುದಾಯದವರೆಗೂ ವಿಸ್ತಾರಗೊಂಡಿತು. ಎಲ್ಲವೂ ಆಕಸ್ಮಿಕ ಎನ್ನುವಂತೆ, ಅಗ್ಗದ ವಿಮಾನ ವೆಚ್ಚ ಮತ್ತು ದೂರ ಸಂಪರ್ಕಗಳು ರಾಷ್ಟ್ರೀಯತೆಯ ಪ್ರಜ್ಞೆಯಾಚೆಗಿನ ನಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳುವುದಕ್ಕೆ ಸಾಕಷ್ಟು ಶಕ್ತಿ ತುಂಬಿದವು.

ನಮ್ಮ ಇಂದಿನ ಜಾಗತಿಕ ಮಾರುಕಟ್ಟೆ ವ್ಯವಸ್ಥೆಯು ಒಂದು ಸ್ಥಿರ ಸಾಮ್ರಾಜ್ಯಶಾಹಿಯ ಹಿಡಿತಕ್ಕೆ ಸಿಲುಕದೇ ಇರುವುದು ಇದರ ಇನ್ನೊಂದು ಸ್ಪಷ್ಟ ಬದಲಾವಣೆ. ಹೆಚ್ಚು ಕಡಮೆ ಎರಡು ಶತಮಾನಗಳವರೆಗೆ ಬ್ರಿಟಿಷರು, ಫ್ರೆಂಚರು, ಜರ್ಮನ್ನರು, ಅಸ್ಟ್ರೋ-ಹಂಗೇರಿಯನ್ನರು ಮತ್ತು ೧೯ನೇ ಶತಮಾನದ ಉತ್ತರಾರ್ಧ ಮತ್ತು ೨೦ನೇ ಶತಮಾನದಲ್ಲಿ ರಷ್ಯನ್ ಸಾಮ್ರಾಜ್ಯದಿಂದ ಭೂಭಾಗಗಳ ವಶಪಡಿಸಿಕೊಳ್ಳುವಿಕೆ ಅವುಗಳ ಮೇಲೆ ನಿಯಂತ್ರಣ ಸಾಧಿಸುವಿಕೆಯ ಮೇಲೆ ಜಾಗತಿಕ ಮಟ್ಟದಲ್ಲಿ ಬಂಡವಾಳಶಾಹಿಗೆ ಒಂದು ಸ್ಪಷ್ಟರೂಪ ಲಭಿಸಿತು. ೧೯೮೯ರಿಂದ ಈಚೆಗೆ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಕಟ್ಟುಪ್ಪಣೆಗಳಿಲ್ಲದ ಜಾಗತಿಕ ವಿಶ್ವಬಂಧುತ್ವದ ಮೊದಲನೇ ಶಕೆಯಲ್ಲಿ ನಾವು ಪದಾರ್ಪಣೆ ಮಾಡಿದ್ದೇವೆ.

ಯುರೋಪ್‌ನ ರಾಜ್ಯ-ರಾಷ್ಟ್ರಗಳ ವ್ಯವಸ್ಥೆಯಲ್ಲಿ ಮೂರು ಅತ್ಯಂತ ಮಹತ್ತರ ಬದಲಾವಣೆಗಳು ಈ ಶತಮಾನದಲ್ಲಿ ನಡೆದಿವೆ. ಆಸ್ಟ್ರೋ-ಹಂಗೇರಿ, ತುರ್ಕಿ ಮತ್ತು ರಷ್ಯನ್ ಸಾಮ್ರಾಜ್ಯಗಳಿಂದ ೧೯೧೮ರ ವರ್ಸೈಲ್ ಒಪ್ಪಂದ, ೧೯೪೫ರ ಯಾಲ್ಟಾ ಒಪ್ಪಂದದ ಮೇರೆಗೆ ರೂಸವೆಲ್ಟ್, ಚರ್ಚಿಲ್ ಮತ್ತು ಸ್ಟಾಲಿನ್ ಪೂರ್ವ ಯುರೋಪ್ ಮತ್ತು ಪಶ್ಚಿಮ ಯುರೋಪ್‌ನಲ್ಲಿ ಹೊಸ ರಾಷ್ಟ್ರಗಳಿಗೆ ಮಾನ್ಯತೆ ನೀಡಿದರೆ, ೧೯೮೯-೧೯೯೧ರ ನಡುವೆ ಸೋವಿಯತ್ ಸಾಮ್ರಾಜ್ಯದ ಪತನ ಮತ್ತು ಯುರೋಪ್‌ನಲ್ಲಿ ಕಮ್ಯೂನಿಸ್ಟ್ ಆಳ್ವಿಕೆಗಳ ಪತನ ಯುರೋಪ್‌ನ್ನು ಪೂರ್ವ ಮತ್ತು ಪಶ್ಚಿಮದ ಪ್ರಭಾವಕ್ಕೆ ಒಳಗಾಗುವಂತೆ ಮಾಡಿತು. ಇವುಗಳ ಪೈಕಿ ಮೂರನೆಯದು ಏಕೆ ವಿಭಿನ್ನವಾದುದು ಎಂದರೆ, ಯಾವುದೇ ಸಾಮ್ರಾಜ್ಯಗಳ ಕರಾರುಗಳಿಲ್ಲದೇ ಘಟಿಸಿತು. ಪ್ರಾದೇಶಿಕ ಸಮಗ್ರತೆಯ ಸಂಘರ್ಷವನ್ನು ಸರಿಪಡಿಸುವುದಕ್ಕೆ ಪೂರ್ವ ಯುರೋಪ್‌ನ ರಾಷ್ಟ್ರಗಳ ಪ್ರಾದೇಶಿಕ ಸಮಗ್ರತೆಯನ್ನು ಕಾಯ್ದುಕೊಳ್ಳುವುದಕ್ಕೆ ಯಾವುದೇ ಒಪ್ಪಂದಗಳು ಆಗಿಲ್ಲ ಮತ್ತು ಈ ಜನರ ಸ್ವನಿರ್ಧಾರದ ಹಕ್ಕು ಅವರಿಗೆ ಮಾತ್ರ ಸೀಮಿತಗೊಂಡಿದೆ. ಇಲ್ಲಿನ ಪ್ರತಿಯೊಂದು ಸಂಘರ್ಷಗಳ ಪರಿಹಾರ ಒಂದು ರೀತಿಯಲ್ಲಿ ಸುಸಂಸ್ಕೃತ ವಿಚ್ಛೇದನದಂತೆ ಇದ್ದು, ಜೆಕ್ ಶೈಲಿಯಲ್ಲಂತೂ ಡಜನ್ ಲೆಕ್ಕದಲ್ಲಿ ಸಶಸ್ತ್ರ ಸಂಘರ್ಷಗಳು ನಡೆದು ಹೋಗಿವೆ. ಈ ಸಂಘರ್ಷಗಳ ಮೂಲ ಇಷ್ಟೇ, ಸಾಮ್ರಾಜ್ಯಶಾಹಿ ಪೊಲೀಸ್ ವ್ಯವಸ್ಥೆಯು ನಿರ್ಗಮಿಸಿದೆ.

ಅಮೆರಿಕ, ಉಳಿದಿರುವ ಏಕೈಕ ಜಾಗತಿಕ ಶಕ್ತಿಶಾಲಿ ರಾಷ್ಟ್ರವಾದರೂ ಅವರದ್ದು ಸಾಮ್ರಾಜ್ಯಶಾಹಿ ಧೋರಣೆಯಲ್ಲ. ಅವರ ಅಧಿಕಾರ ಚಲಾಯಿಸುವಿಕೆ ನಿಯಂತ್ರಣ ಹೇರುವಿಕೆ ಮುಂತಾದವುಗಳು ಕೇವಲ ತಮ್ಮ ರಾಷ್ಟ್ರದ ಹಿತಾಸಕ್ತಿ ರಕ್ಷಿಸುವುದಕ್ಕೆ ಮಾತ್ರ ಸಿಮೀತವಾಗಿದೆಯೇ ವಿನಾ ಜಾಗತಿಕ ವ್ಯವಸ್ಥೆಯನ್ನು ಕಾಯ್ದುಕೊಳ್ಳುವ ಹೊಣೆಗಾರಿಕೆ ಹೊತ್ತುಕೊಂಡಿಲ್ಲ. ಇದರ ಪರಿಣಾಮವಾಗಿ ಆಫ್ರಿಕಾ, ಪೂರ್ವ ಯುರೋಪ್, ಸೋವಿಯತ್ ಏಷ್ಯಾ, ಲ್ಯಾಟಿನ್ ಅಮೆರಿಕ ಮತ್ತು ಸಮೀಪ ಪ್ರಾಚ್ಯ ರಾಷ್ಟ್ರಗಳು ಸಾಮ್ರಾಜ್ಯಶಾಹಿಯ ಅಥವಾ ಮಹಾನ್ ಶಕ್ತಿಗಳ ಪ್ರಭಾವದ ವ್ಯಾಪ್ತಿಗೆ ಬರಲಿಲ್ಲ. ಅಂದರೆ ಜಗತ್ತಿನ

ಬಹುದೊಡ್ಡ ಪ್ರಮಾಣದ ಜನಸಂಖ್ಯೆ ಅತ್ಯಂತ ಹಿಂಸಾತ್ಮಕ ವಿಧಾನಗಳಿಂದ ಸ್ವನಿರ್ಧಾರದ ಹಕ್ಕು ಗಳಿಸಿಕೊಂಡಿದ್ದು ತಮ್ಮ ದಾರಿ ತಾವೇ ಕಂಡುಕೊಳ್ಳುವುದಕ್ಕೆ ಬಿಟ್ಟುಬಿಡಲಾಗಿದೆ. ಹೀಗಾಗಿ ಸೋಮಾಲಿಯಾದಲ್ಲಿ ನಡೆಯುತ್ತಿರುವಂತೆ ಅಥವಾ ಆಫ್ರಿಕದ ಇತರ ಅನೇಕ ದೇಶಗಳಲ್ಲಿ ಜರುಗುತ್ತಿರುವಂತೆ ಆ ದೇಶಗಳು ಅಧಃಪತನವಾಗುತ್ತಿರುವುದು ಆಶ್ಚರ್ಯಕರವೆನಿಸುವುದಿಲ್ಲ. ಒಂದು ಕಾಲದಲ್ಲಿ ಸಾಮ್ರಾಜ್ಯಶಾಹಿಗಳ ಬಹುದೊಡ್ಡ ಸೈನ್ಯದ ಕಣ್ಗಾವಲಿನಲ್ಲಿರುತ್ತಿದ್ದ ನಿರ್ಣಾಯಕ ಸ್ಥಳಗಳು ವಿಶೇಷವಾಗಿ, ಬಾಲ್ಕನ್ ಭೂಭಾಗದಲ್ಲಿ, ಸಾಮ್ರಾಜ್ಯಶಾಹಿಯ ಮಧ್ಯಸ್ಥಗಾರನ ಅನುಪಸ್ಥಿತಿಯಿಂದಾಗಿ ಯಾರಲ್ಲಿ ನಮ್ಮ ನೋವು ಮತ್ತು ನ್ಯಾಯಕ್ಕಾಗಿ ಮೊರೆ ಹೋಗಬೇಕೆಂದು ಗೊತ್ತಾಗುತ್ತಿಲ್ಲ. ಒಂದು ಸಣ್ಣ ಅಚ್ಚರಿಯೆಂದರೆ, ಪ್ರಬಲ ಕೈಗಳ ಹಿಡಿತದ ಅನುಪಸ್ಥಿತಿಯಲ್ಲಿ ಸಾಮ್ರಾಜ್ಯದ ಅಸ್ತಿತ್ವದಿಂದಾಗಿ ದೀರ್ಘ ಕಾಲದಿಂದ ಕಾದು ಕುಳಿತಂತಿದ್ದ ಇವರು ಈಗ ಅಂತಿಮ ಯುದ್ಧ ಸಾರಿದವರಂತೆ ಒಬ್ಬರ ಮೇಲೆ ಇನ್ನೊಬ್ಬರು ಸೇಡು ತೀರಿಸಿಕೊಳ್ಳುತ್ತಿದ್ದಾರೆ.

ಸಾಮ್ರಾಜ್ಯಶಾಹಿಯ ಅನಂತರ ಹುಟ್ಟಿಕೊಂಡ ಜಾಗತಿಕತೆಯು ಸಂಪದ್ಭರಿತ ಪಶ್ಚಿಮದಲ್ಲಿ ಜೀವನ ನಡೆಸುತ್ತಿರುವ ಕಾಸ್ಮೋಪಾಲಿಟನ್‌ಗಳಲ್ಲಿ ಮಾತ್ರ ರಾಷ್ಟ್ರೀಯತಾ ಪ್ರಜ್ಞೆಯಾಚೆಯ ಚಿಂತನೆಗೆ ಅನುವು ಮಾಡಿಕೊಟ್ಟಿತು. ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕೆ ರಾಜ್ಯಗಳನ್ನು ಸ್ಥಾಪಿಸಲು ಹೆಣಗಾಡುತ್ತಿದ್ದ ಅನೇಕ ಸಣ್ಣ ಗುಂಪಿನ ಜನರು ಹಿಂಸೆ ಮತ್ತು ಅರಾಜಕತೆಯಿಂದ ಜರ್ಜರಿತರಾಗಿ ದುರ್ಬಲಗೊಂಡರು. ತಮ್ಮ ರಕ್ಷಣೆಗೆ ಬೇರೆಯವರತ್ತ ಮೊರೆ ಹೋಗಿರುವ ಜನರನ್ನು ಪರಿಗಣಿಸುವುದಾದರೆ ಬೋಸ್ನಿಯಾದ ಮುಸ್ಲಿಂರ ನಿಸ್ಸಹಾಯಕತೆ ಅತ್ಯುತ್ತಮ ಉದಾಹರಣೆಯಾಗಿ ನಿಲ್ಲಬಲ್ಲುದು. ಸಾರಾಜೆವೋದ ಜನರು ನಿಜವಾಗಿಯೂ ವಿಶ್ವಬಂಧುತ್ವಕ್ಕೆ ಮಾನ್ಯತೆ ನೀಡಿದವರು ವೈವಿಧ್ಯಮಯ ಜನಾಂಗೀಯತೆಯಲ್ಲಿ ಅಪಾರ ನಂಬಿಕೆಯುಳ್ಳವರು. ಅದರೆ ತಮ್ಮ ಅನಿಸಿಕೆಯನ್ನು ಎತ್ತಿ ಹಿಡಿದು ಶಾಂತಿ ವ್ಯವಸ್ಥೆ ಮುಂದುವರಿಯುವಂತೆ ಮಾಡುವ ನಿಟ್ಟಿನಲ್ಲಿ ಅವರಿಗೆ ಒಂದು ಸಮರ್ಥ ಸಾಮ್ರಾಜ್ಯಶಾಹಿ ರಕ್ಷಕ ಅಥವಾ ಅವರದ್ದೇ ಆದ ರಾಜ್ಯ ಇರಲಿಲ್ಲ. ವಿಶ್ವಬಂಧುತ್ವದ ಸುಶೀಲತೆಯಲ್ಲಿ ನಂಬಿಕೆಯನ್ನು ಇರಿಸಿದವರು ಬೋಸ್ನಿಯಾದಲ್ಲಿ ನಡೆದ ಘಟನೆಗಳ ಬಗ್ಗೆ ಒಂದರೆಕ್ಷಣವಾದರೂ ಚಿಂತನೆ ಮಾಡುವಂತೆ ಮಾಡಿತು. ಸುರಕ್ಷಿತ ರಾಷ್ಟ್ರಗಳನ್ನು ಮಾತ್ರ ತಮ್ಮದಾಗಿಸಿಕೊಳ್ಳುವವರಿಗೆ ಮಾತ್ರ ಕಾಸ್ಮೋಪಾಲಿಟನ್ (ವಿಶ್ವಬಂಧುತ್ವ) ಅನುಕೂಲತೆಗಳು ದೊರೆಯುತ್ತವೆನ್ನುವುದು ಮೇಲ್ನೋಟಕ್ಕೆ ಗೋಚರಿಸಿದಂತಾಗುತ್ತದೆ. ಸಾಮ್ರಾಜ್ಯಶಾಹಿಯ ಕಾಲಘಟ್ಟದಿಂದ ನಾವು ಸಾಗಿ ಬಂದಿದ್ದರೂ ಸಹ ನಾವು ರಾಷ್ಟ್ರೀಯತಾವಾದ ಕಾಲಘಟ್ಟದಿಂದಾಚೆ ಇನ್ನೂ ಹೊರ ಬಂದಿಲ್ಲ ಮತ್ತು ಎಂದಾದರೂ ನಾವು ಇದನ್ನು ಸಾಧಿಸುವೆವೇ ಎಂಬುದು ಸದ್ಯದ ಭವಿಷ್ಯದಲ್ಲಂತೂ ಕಾಣಸಿಗುವುದಿಲ್ಲ. ಲಂಡನ್, ಲಾಸ್ ಏಂಜಲಿಸ್, ನ್ಯೂಯಾರ್ಕ್, ಪ್ಯಾರಿಸ್‌ನಂತಹ ಮಹಾನ್ ನಗರಗಳಲ್ಲಿನ

ಕಾಸ್ಮೋಪಾಲಿಟನ್ ವ್ಯವಸ್ಥೆಯು ಅನುಚಾನವಾಗಿ ಮುಂದುವರಿಯಬೇಕಾದರೆ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸುವ ಸಾಮರ್ಥ್ಯ ಆ ರಾಷ್ಟ್ರಗಳಲ್ಲಿರಬೇಕು. ೧೯೯೨ರಲ್ಲಿ ಲಾಸ್ ಏಂಜಲಿಸ್‌ನಲ್ಲಿ ಯಾವ ರೀತಿ ಕಾನೂನು ವ್ಯವಸ್ಥೆ ಮುರಿದುಬಿತ್ತೋ ಆ ರೀತಿ ಕಾನೂನು ವ್ಯವಸ್ಥೆ ಮುರಿದಲ್ಲಿ, ಯಾವುದೇ ಯುರೋಪಿಯನ್ ರಾಷ್ಟ್ರಗಳಲ್ಲಿನ ಸುಂಸ್ಕೃತ, ಬಹುಜನಾಂಗೀಯ ನಗರಗಳು ಜನಾಂಗೀಯ ಯುದ್ಧ ಭೂಮಿಗಳಾಗುವಂತಹ ಎಲ್ಲ ಸಾಧ್ಯತೆಗಳು ಮೇಲ್ನೋಟಕ್ಕೆ ಇಲ್ಲಿ ವ್ಯಕ್ತಗೊಳ್ಳುವುದು ಸಹಜ.

ಹೀಗೆ ವಿಚಾರ ಮಾಡಿದಲ್ಲಿ, ನನ್ನಂತಹ ವಿಶ್ವಬಂಧುತ್ವವಾದಿಗಳು ರಾಷ್ಟ್ರದಾಚೆ ವಿಚಾರ ಮಾಡುವಂತಿಲ್ಲ ಮತ್ತು ಈ ಕಾಸ್ಮೋಪಾಲಿಟನ್ ಮತ್ತು ರಾಷ್ಟ್ರೀಯತೆ ಭಾವನೆಗಳು ಅಂತಿಮವಾಗಿ ರಾಷ್ಟ್ರ ರಕ್ಷಣೆ ಮತ್ತು ತನ್ನ ನಾಗರಿಕರಿಗೆ ಒದಗಿಸುವ ರಕ್ಷಣೆಯ ಮೇಲೆ ಅವಲಂಬಿತವಾಗಿರುತ್ತವೆ. ಹೀಗೆ ವಿಚಾರ ಮಾಡಿದಲ್ಲಿ, ನಾನೊಬ್ಬ ನಾಗರಿಕ ರಾಷ್ಟ್ರೀಯವಾದಿ. ಇಂತಹವರು ಮಾತ್ರ ದೇಶವೊಂದರ ಅಗತ್ಯಗಳನ್ನು ಮತ್ತು ತನ್ನ ನಾಗರಿಕರಿಗೆ ಭದ್ರತೆ ಮತ್ತು ಹಕ್ಕುಗಳನ್ನು ಒದಗಿಸುವ ನಿಟ್ಟಿನಲ್ಲಿ ದೇಶದ ಸಾಮರ್ಥ್ಯ ರಕ್ಷಿಸುವ ವಿಚಾರದಲ್ಲಿ ನಾಗರಿಕರು ಮಾಡಬೇಕಿರುವ ಕರ್ತವ್ಯಗಳಲ್ಲಿ ನಂಬಿಕೆ ಇರಿಸಿದವನು. ಕಾಸ್ಮೋಪಾಲಿಟನ್ ಬಗ್ಗೆ ತಳೆಯುವ ಉಗ್ರಸ್ವಭಾವ ಮತ್ತು ಅಸಡ್ಡೆಗಳು ಸ್ವತಂತ್ರ ರಾಜ್ಯಕ್ಕಾಗಿ ನಡೆಯುವ ಹೋರಾಟದ ದಿಕ್ಕಿನ ಹಾದಿ ತಪ್ಪಿಸಿವೆ. ಒಟ್ಟಾರೆಯಾಗಿ ಹೇಳಬೇಕೆಂದಲ್ಲಿ ವಿಶ್ವಬಂಧುತ್ವ ಅಥವಾ ಕಾಸ್ಮೋಪಾಲಿಟನ್ ಸವಲತ್ತುಗಳ ಬಗೆಗಿನ ಹೋರಾಟವನ್ನು ತೀರ ಹಗುರವಾಗಿ ತೆಗೆದುಕೊಳ್ಳಲಾಗಿದೆ.

**ಆರು ಪಯಣಗಳು**

ಸಾಮಾನ್ಯವಾಗಿ ರಾಷ್ಟ್ರೀಯತೆಯ ಬಗ್ಗೆ ಸಾಕಷ್ಟು ಹೇಳಲು ಸಾಧ್ಯವಿದೆ. ಇದು ನಾನಾ ರೀತಿಯ ವೇಷಗಳಲ್ಲಿರುವ ಒಂದೇ ಸಂಗತಿಯಲ್ಲ, ರಾಷ್ಟ್ರೀಯತೆ ತತ್ತ್ವಗಳು ಒಂದು ಪ್ರದೇಶದಲ್ಲಿ ಭಯಾನಕ ಪರಿಣಾಮಗಳಿಗೆ ಕಾರಣವಾಗಬಹುದು ಮತ್ತು ಬೇರೆ ಪ್ರದೇಶಗಳಲ್ಲಿ ಇದರ ಪರಿಣಾಮ ನಿರುಪದ್ರವಿಯಾಗಿ ಸಕಾರಾತ್ಮಕವಾಗಿರಬಹುದು. ಆದರೆ ಸಂದರ್ಭ ಮಾತ್ರ ಒಂದೇ ಆಗಿರುತ್ತದೆ. ಎಷ್ಟು ಸಾಧ್ಯವೋ ಅಷ್ಟು ಮಾರುವೇಷಗಳಲ್ಲಿ ರಾಷ್ಟ್ರೀಯತೆಯನ್ನು ನೋಡುವುದಕ್ಕೆ ನಾನು ಬಯಸುತ್ತೇನೆ. ಆದರೆ ನಾನು ಎಲ್ಲಿ ಅಂತ ಹೋಗುವುದು ?

ನಾನು ಆಯ್ದುಕೊಂಡ ಪ್ರವಾಸ ಖಾಸಗಿಯಾಗಿತ್ತು ಆದರೆ ಇದು ಸ್ವೇಚ್ಛಾನುಸಾರ ಆಗಲಿಕ್ಕಿಲ್ಲ ಎನ್ನುವ ಆಶಾಭಾವನೆ ನನ್ನಲ್ಲಿತ್ತು. ಮೂಲ ವೈಚಾರಿಕತೆಗಳನ್ನು ವಿವರಿಸಲು ಸಾಧ್ಯವಾಗುವಂತಹ ನಾನು ಜೀವನ ಮಾಡಿದ ನನಗೆ ಇಷ್ಟವಾದ ಮತ್ತು ಸಾಕಷ್ಟು ಪರಿಚಿತವಿರುವ ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿದ್ದೆ.

ನನ್ನ ಪ್ರಯಾಣವನ್ನು ಯುಗೋಸ್ಲಾವಿಯಾದಿಂದ ಆರಂಭಿಸಿದೆ. ಏಕೆಂದರೆ ಅಲ್ಲಿ ನಾನು ನನ್ನ ಬಾಲ್ಯಾವಸ್ಥೆಯ ಎರಡು ವರ್ಷಗಳನ್ನು ಕಳೆದಿದ್ದೆ ಮತ್ತು ಟಿಟೋನ ಉತ್ತುಂಗದ ಆಡಳಿತಾವಧಿಯಲ್ಲಿ ಪ್ರಚಲಿತಕ್ಕೆ ಬಂದ ಕುಪ್ರಸಿದ್ಧ "ಜನಾಂಗೀಯ ಸಂಪೂರ್ಣ ನಿರ್ಮೂಲನೆ" ಪದದ ಬಳಕೆ ಇಲ್ಲಿಂದಲೇ ಆರಂಭವಾಗಿರಬೇಕು. ಹೀಗಾಗಿ ಈ ಸ್ಥಳ ನನಗೆ ಸಾಕಷ್ಟು ಪರಿಚಿತವಾಗಿತ್ತು. ಎಂದೆಂದಿಗೂ ಅಂತ್ಯಗೊಳ್ಳದ ಬಾಲ್ಕನ್ನರ ಆಂತರಿಕ ಜನಾಂಗೀಯ ಯುದ್ಧಕಾಲದ ಟಿಟೋನ ೩೫ ವರ್ಷಗಳ ಆಳ್ವಿಕೆ ಈ ಯುದ್ಧಕ್ಕೆ ವಿರಾಮ ನೀಡಿದ ಕಾಲ ಎಂದು ನನಗೆ ಅನ್ನಿಸುವುದಿಲ್ಲ. ಯುಗೋಸ್ಲಾವಿಯಾದಲ್ಲಿ ಏಷಿಯನ್ನರು ಸರ್ಬಿಯನ್ನರು ಮತ್ತು ಮುಸ್ಲಿಮರು ನೆರೆಹೊರೆಯವರಂತೆ ಜೀವಿಸುತ್ತಿರುವುದು ನನಗೆ ಬಹಳ ಇಷ್ಟವಾಗಿತ್ತು. ಹಾಗಿದ್ದ ಮೇಲೆ ನೆರೆಹೊರೆಯವರನ್ನು ವೈರಿಯಂತೆ ಪರಿವರ್ತಿಸಿದ ಕಾರಣ ಏನು? ಅದು ಹೇಗೆ ರಾಷ್ಟ್ರೀಯತೆಯ ಹುಚ್ಚು ಅಂತರ್ಜನಾಂಗೀಯ ವ್ಯವಸ್ಥೆಯನ್ನು ಹಾಳುಗೆಡವಿತು ಮತ್ತು ಇಬ್ಭಾಗಗೊಂಡ, ಏಕ ಜನಾಂಗೀಯ ಹೊಸ ವ್ಯವಸ್ಥೆಯನ್ನು ಹುಟ್ಟು ಹಾಕಿತು?

ನನ್ನ ಮುಂದಿನ ಪ್ರಯಾಣ ಜರ್ಮನಿ, ರೋಮ್ಯಾಂಟಿಕ್ ಅಡಿಯಲ್ಲಿ ಜನಾಂಗೀಯ ರಾಷ್ಟ್ರೀಯತಾವಾದವನ್ನು ಹುಟ್ಟು ಹಾಕಿ ಅನಂತರದ ಕಾಲಾವಧಿಯಲ್ಲಿ ಜನಾಂಗೀಯ ರಾಷ್ಟ್ರೀಯವಾದವನ್ನು ಈ ದೇಶ ಹೊರ ಹಾಕಿತು. ಇದೀಗ ಪಶ್ಚಿಮ ಯುರೋಪಿನಲ್ಲಿ ಜನಾಂಗೀಯ ರಾಷ್ಟ್ರೀಯತಾವಾದವನ್ನು ಕಾಯ್ದುಕೊಳ್ಳುವುದಕ್ಕೆ ಹೋರಾಟ ಮಾಡುತ್ತಿದೆ. ಹಿಟ್ಲರ್ ನಂತರ ಜರ್ಮನಿಯು ತನ್ನನ್ನು ತಾನೇ ಒಂದು ನಾಗರಿಕ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಬಿಂಬಿಸುತ್ತಿದೆ ಆದಾಗ್ಯೂ ಸಹ ಇಲ್ಲಿನ ನಾಗರಿಕತ್ವದ ಕಾಯ್ದೆಗಳು ಜನಾಂಗೀಯತೆಯ ಮೇಲೆ ವ್ಯಾಖ್ಯಾನಗೊಂಡಿವೆ. ತನ್ನ ಹಿಂದಿನ ಜನಾಂಗೀಯ ರಾಷ್ಟ್ರೀಯತಾವಾದ ಮತ್ತು ಭವಿಷ್ಯದ ನಾಗರಿಕ ರಾಷ್ಟ್ರೀಯತಾವಾದಗಳ ನಡುವಿನ ಆಯ್ಕೆಯ ಮಧ್ಯೆ ಸಿಲುಕಿ ಒದ್ದಾಡುತ್ತಿರುವ ಯುರೋಪ್‌ನ ಒಂದು ಸಮಾಜವಾಗಿದೆ.

ಸೋವಿಯತ್ ಸಾಮ್ರಾಜ್ಯದ ೧೫ ದೇಶಗಳಲ್ಲಿ ಅತ್ಯಂತ ದೊಡ್ಡ ದೇಶವಾಗಿರುವ ಉಕ್ರೇನ್, ಒಂದು ಅಣುಶಕ್ತಿ ರಾಷ್ಟ್ರವಾಗಿ ತನ್ನ ಪ್ರಥಮ ಸ್ವಾತಂತ್ರ್ಯವನ್ನು ಅನುಭವಿಸುವ ವೇಳೆ ಶತಶತಮಾನಗಳ ರಷ್ಯದ ಆಡಳಿತದಿಂದ ಹೊರಗೆ ಬರುವುದು ಎಷ್ಟು ಕಷ್ಟ ಎನ್ನುವುದರ ಅನುಭವಕ್ಕೆ ಪಡೆದಿದೆ. ಗತ ಸೋವಿಯತ್ ಸಾಮ್ರಾಜ್ಯದ ಪ್ರದೇಶಗಳನ್ನು ಪ್ರವಾಸಕ್ಕೆ ಆಯ್ಕೆ ಮಾಡಿಕೊಳ್ಳುವುದು ಅತ್ಯಂತ ಸಹಜ ವಿಚಾರ. ಆದರೆ ಉಕ್ರೇನ್ ಆಯ್ಕೆ ಮಾಡಿಕೊಳ್ಳುವುದರ ಹಿಂದೆ ವೈಯಕ್ತಿಕ ಕಾರಣವೂ ಇತ್ತು. ನನ್ನ ಅಜ್ಜ ಮತ್ತು ಮುತ್ತಜ್ಜಂದಿರು ಉಕ್ರೇನ್‌ನಲ್ಲಿ ಜಮೀನ್ದಾರರು ಆಗಿದ್ದರು. ಹೀಗಾಗಿ ಎಸ್ಟೇಟ್‌ಗೆ ಮರಳುವುದಕ್ಕಿಂತ ನನ್ನ ಪೂರ್ವಿಕರು ಯಾವ ರೀತಿ ಹೊಸ ರಾಜ್ಯದ ಉದಯವನ್ನು ನೆನಪಿಸಿಕೊಳ್ಳುತ್ತಾರೆ ಮತ್ತು ಉಕ್ರೇನ್ ಮತ್ತು ರಷ್ಯನ್

ಅಸ್ಮಿತೆಯನ್ನು ಆಳವಾಗಿ ಅಧ್ಯಯನ ಮಾಡುವುದಕ್ಕೆ ಇದಕ್ಕಿಂತ ಉತ್ತಮ ಮಾರ್ಗ ಇನ್ನಾವುದು ಇದೆ ಎಂದು ನಾನು ಯೋಚಿಸಿದೆ.

ಇದೇ ತೆರನಾದ ವೈಯಕ್ತಿಕ ಕಾರಣ ನನ್ನನ್ನು ಕ್ಯುಬೆಕ್‌ಗೂ ಎಳೆದುಕೊಂಡು ಹೋಯಿತು. ಇಲ್ಲಿಯೇ ನನ್ನ ರಷ್ಯನ್ ಅಜ್ಜಮುತ್ತಜ್ಜಂದಿರು ದೇಶಭ್ರಷ್ಟಗೊಂಡು ತಮ್ಮ ಜೀವಬಿಟ್ಟಿದ್ದರು. ನಾನು ಚೆನ್ನಾಗಿ ತಿಳಿದುಕೊಂಡಿರುವಂತೆ ರಾಷ್ಟ್ರೀಯತೆಯು ನನ್ನ ದೇಶ ಕೆನಡಾವನ್ನು ಕನಿಷ್ಠ ಏನಿಲ್ಲವೆಂದರೂ ೩೦ ವರ್ಷಗಳವರೆಗೆ ಎರಡು ಭಾಗ ಮಾಡಿತ್ತು. ಇಲ್ಲಿ ರಾಷ್ಟ್ರೀಯತೆ ಆಧುನಿಕ ಸ್ವರೂಪದಲ್ಲಿದೆ. ಪರಿಪಕ್ವಗೊಂಡಿದೆ ಮತ್ತು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಸಮಾಜವಿದೆ. ಸಂಸ್ಕೃತಿ ಮತ್ತು ಭಾಷೆಗಳಿಗೆ ಸಂಬಂಧಿಸಿದ ಸ್ವನಿರ್ಧಾರ ಬೇಡಿಕೆಗಳು ಮೂಲ ಪ್ರಶ್ನೆಗಳನ್ನು ಎತ್ತುತ್ತಿದ್ದು ಇವುಗಳು ಸ್ಕಾಟ್‌ಲ್ಯಾಂಡ್ ಮತ್ತು ಕ್ಯಾಟಾಲೋನಿಯಾದ ಸಮಸ್ಯೆಗಳಷ್ಟೇ ಮಹತ್ತ್ವ ಪಡೆದಿವೆ. ನಿಮಗೆ ಈಗಾಗಲೇ ರಾಷ್ಟ್ರವೊಂದರ ಮಾನ್ಯತೆಯೂ ಮತ್ತು ಸ್ವಾಯತ್ತತೆಯೂ ಇರುವ ವೇಳೆ ನಿಮಗೆ ನಿಮ್ಮದೇ ಆದ ಸ್ವತಂತ್ರ ರಾಜ್ಯದ ಅಗತ್ಯಾದರೂ ಏನು?

ರಾಷ್ಟ್ರೀಯತಾವಾದವನ್ನು ಕೆಲವೊಂದು ಸಂದರ್ಭಗಳಲ್ಲಿ ಬುಡಕಟ್ಟುವಾದ ಎಂದು ಕರೆಯುವಂತಹ ಸಂದರ್ಭದಲ್ಲಿ ಉತ್ತರ ಕ್ಯುಬೆಕ್‌ನ ಮೂಲನಿವಾಸಿಗಳ ಮಧ್ಯೆ ರಾಷ್ಟ್ರೀಯ ಮತ್ತು ಬುಡಕಟ್ಟು ಪ್ರಜ್ಞೆಗಳು ಹೇಗೆ ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುತ್ತವೆ ಎನ್ನುವುದನ್ನು ಹತ್ತಿರದಿಂದ ಗಮನಿಸುವಂತೆ ಕ್ಯುಬೆಕ್‌ನವರಿಗೆ ಆಹ್ವಾನ ನೀಡಲಾಯಿತು. ಉತ್ತರದ ಆರ್ಥಿಕಾಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿದ ಕ್ಯೂಬೆಕ್‌ನವರೊಂದಿಗೆ ಭಾಷೆಯನ್ನು ರಾಷ್ಟ್ರೀಯ ಸ್ವ-ನಿರ್ಧಾರವನ್ನಾಗಿ ಮಾಡಿಕೊಂಡ ಕ್ರೀಮಿಯನ್‌ಗಳಿಗೆ ಸೆಣಸುವುದಕ್ಕೆ ಆಗುತ್ತದೆಯೇ ?

ಉಕ್ರೇನ್‌ನಲ್ಲಿ ಕ್ರಿಮಿಯನ್ ತಾತಾರ್‌ನೊಬ್ಬ ನನಗೆ ಹೇಳಿದಂತೆ, ಯಾವನಿಗೆ ತಾಯಿ ಇಲ್ಲವೋ ಅವನಿಗೆ ಮಾತ್ರ ತಾಯಿಯ ಮಹತ್ತ್ವ ತಿಳಿದಿರುತ್ತದೆ. ಅದೇ ರೀತಿ ರಾಜ್ಯವಿಲ್ಲದ ವ್ಯಕ್ತಿಗೆ ಮಾತ್ರ ರಾಜ್ಯ-ರಾಷ್ಟ್ರದ ಮಹತ್ತ್ವ ಏನು ಅನ್ನುವುದು ಅರಿವಿರುತ್ತದೆ. ಕ್ರಿಮಿಯನ್ ತಾತಾರ್‌ಗಳು-ಪ್ಯಾಲೀಸ್ತಿನಿಯನ್ನರು ಮತ್ತು ಬಹುಸಂಖ್ಯಾತ ಕುರ್ದಿಶ್‌ಗಳವರೆಗೆ ಅನೇಕಾನೇಕ ದೇಶಹೀನ ಜನರಿದ್ದಾರೆ. ಗಲ್ಫ್ ಯುದ್ಧದಲ್ಲಿ ಪಾಲ್ಗೊಂಡ ಪಶ್ಚಿಮದ ಸೈನ್ಯದಿಂದ ಉತ್ತರದ ಇರಾಕ್‌ನಲ್ಲಿ ರೂಪುಗೊಂಡ ಕುರ್ದಿಷ್ ಪರಾವೃತ್ತ ಪ್ರದೇಶದಲ್ಲಿನ ಸೀಮಿತ ಸ್ವಾಯತ್ತತೆ ಮತ್ತು ಸ್ವಆಡಳಿತವು ಅಲ್ಲಿನ ಜನರು ಸ್ವಂತ ನೆಲೆ ಇಲ್ಲದವರು ಹೇಗೆ ಪರಿವರ್ತನೆಗೊಳ್ಳುವುದಕ್ಕೆ ಕಾರಣವಾಯಿತು ಎನ್ನುವುದನ್ನು ನಾನು ನೋಡುವಂತಾಯಿತು. ತಾಯ್ನೆಲಕ್ಕಾಗಿ ಕುರ್ದಿಶ್ ಗಳು ೨೦ನೇ ಶತಮಾನದ ನಾಲ್ಕು ಅತ್ಯಂತ ಉಗ್ರ ಜ್ಯಾತ್ಯತೀತವಾದ ಮತ್ತು ಧಾರ್ಮಿಕ ರಾಷ್ಟ್ರೀಯವಾದಗಳಾದ ಕೆಮೆಲ್ ಅತಾಕುರ್ಕ್ನ ಟರ್ಕಿ, ಆಯಾತೊಲ್ಲಾ ಖೋಮೆನಿಯ ಇರಾನ್ ಮತ್ತು ಸದ್ದಾಮ್ ಹುಸ್ಸೇನ್‌ನ ಇರಾಕ್

ಮತ್ತು ಹಫೀಜ್ ಅಸ್ಸಾದ್‌ನ ಸಿರಿಯಾ ವಿರುದ್ಧ ಹೋರಾಟ ಮಾಡಬೇಕಾಯಿತು. ಅವರ ಈ ರಾಷ್ಟ್ರೀಯ ಹೋರಾಟ ಎಲ್ಲ ಕುರ್ದಿಶ್‌ಗಳನ್ನು ಒಟ್ಟಿಗೆ ತರಲು ಸಾಧ್ಯವಾಯಿತೆ? ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ ರಾಷ್ಟ್ರೀಯತೆಯು ರಾಷ್ಟ್ರದ ಉದಯಕ್ಕೆ ಕಾರಣವಾಗಬಲ್ಲದೇ?

ನನ್ನ ಅಂತಿಮ ಪ್ರವಾಸ ನಾನು ಸ್ವೀಕರಿಸಿದ ಬ್ರಿಟಿಷ್ ದ್ವೀಪಗಳು ರಾಷ್ಟ್ರೀಯ ಅಸ್ಮಿತೆಗೆ ಮಾಡುತ್ತಿರುವ ಗಲಾಟೆಯನ್ನು ಪರಿಗಣಿಸುವಂತೆ ಮಾಡಿತು. ಬೆಲ್‌ಫಾಸ್ಟ್ನ ಬೀದಿಗಳನ್ನು ಹೊರತುಪಡಿಸಿ ಬೇರೆ ಎಲ್ಲಿ ಈ ಅಸ್ಮಿತೆಯನ್ನು ತೀರ ಸನಿಹದಿಂದ ಗಮನಿಸುವುದಕ್ಕೆ ಸಾಧ್ಯ. ಇಲ್ಲಿ ಬ್ರಿಟಿಷ್‌ಗೆ ನಿಷ್ಠವಾಗಿರುವ ಸಮುದಾಯವೊಂದು ಕಳೆದ ೭೫ ವರ್ಷಗಳಿಂದ ನಡೆಸುತ್ತಿರುವ ಪಶ್ಚಿಮ ಯುರೋಪ್‌ನ ಅತ್ಯಂತ ಹಿಂಸಾತ್ಮಕ ಚಳವಳಿಯ ವಿರುದ್ಧ ಐರಿಷ್ ರಿಪಬ್ಲಿಕನ್ ಆರ್ಮಿ ತನ್ನ ಬ್ರಿಟಿಷ್ ಅಸ್ಮಿತೆಗೆ ಹೋರಾಡುತ್ತಿದೆ. ಹಾಗಿದ್ದರೆ ನಿಷ್ಠಾವಂತಿಕೆ ಯಾವುದಕ್ಕೆ ನಿಷ್ಠವಾಗಿರುತ್ತದೆ? ಇದು ಬ್ರಿಟಿಷ್ ಅಸ್ಮಿತೆಯ ಒಟ್ಟು ಸಮೂಹ ಸನ್ನಿಯೇ ಅಥವಾ ಅದೊಂದು ಕನ್ನಡಿಯೇ ಅಲ್ಲಿ ಬ್ರಿಟಿಷರು ತಾವು ನಿಜವಾಗಿಯೂ ಯಾರು ಎಂದು ತಿಳಿದುಕೊಳ್ಳುವುದಕ್ಕೆ ಕನ್ನಡಿಯಲ್ಲಿ ಕಾಣುವ ವಿಕಟ ಚಿತ್ರ ನೋಡುತ್ತಿರುವುದೇ? ಪಕ್ಕಾ ಬ್ರಿಟಿಷ್ ಅಸ್ಮಿತೆಯ ನೆಲೆವೀಡಾದ ಅಲ್ಸಟರ್‌ಗೆ ಬಂದಾಗ ವಿಶೇಷವಾಗಿ ಬ್ರಿಟಿಷ್ ಮತ್ತು ಒಟ್ಟಾರೆ ಕಾಸ್ಮೋಪಾಲಿಟನ್‌ಗಳಲ್ಲಿನ ಒಣ ಅಹಮ್ಮಿಕೆಯ ಎದುರು ನಿಲ್ಲುವಂತೆ ಮಾಡಿತು. ಶೀತಲ ಯುದ್ಧಕಾಲದ ಪೂರ್ವನಿಗದಿತ ಗಡಿಗಳನ್ನು ಕಿತ್ತೊಗೆದ ಜನಾಂಗೀಯ ರಾಷ್ಟ್ರೀಯವಾದವನ್ನು ನೋಡಿಯಾಗಿದೆ. ಪ್ರತಿಯೊಬ್ಬರು ಮತಾಂಧರೇ, ಆದರೆ ನಮಗದು ರಾಷ್ಟ್ರೀಯತಾವಾದ ಅಷ್ಟೇ. ಸ್ಯಾಮುಯಲ್ ಜಾನ್ಸನ್ ಹೇಳಿದ ರಾಷ್ಟ್ರಭಕ್ತಿ ಎನ್ನುವುದು ನೀಚನ ಅಂತಿಮ ಆಶ್ರಯತಾಣವಾದರೆ, ರಾಷ್ಟ್ರೀಯತಾವಾದದ ಅನಂತರ ಇತರರ ರಾಷ್ಟ್ರೀಯ ಭಾವನೆಗಳಿಗೆ ಬಗ್ಗೆ ತೋರುವ ಅಸಡ್ಡೆ ಮತ್ತು ತಿರಸ್ಕಾರಗಳು ವಿಶ್ವಬಂಧುತ್ವದ ಅಂತಿಮ ಆಶ್ರಯತಾಣ ಆಗಬಹುದು.